ಜನಮನದ ದನಿ


# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

31 ಜುಲೈ, 2026 ಶುಕ್ರವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 140 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಭಾರತೀಯ ಕ್ರಿಕೆಟ್ ಕಂಡ ಪ್ರಮುಖ ಬ್ಯಾಟ್ಸ್ ಮನ್ ಅಜಿಂಕ್ಯ ರಹಾನೆ ಅವರು ಎಲ್ಲಾ ಮಾದರಿಯ ಕ್ರಿಕೆಟ್‌ಗೆ ಅಧಿಕೃತವಾಗಿ ಗುರುವಾರ ನಿವೃತ್ತಿ ಘೋಷಿಸಿದ್ದಾರೆ.


ರಾಗಿಣಿ ದ್ವಿವೇದಿ ಹೇಳಿದ್ದೇನು ? » 2


ಬೇಲೂರಿನಲ್ಲಿ ಶೇ.88.57 ಡಿಜಿಟಲೀಕರಣ ಪೂರ್ಣ » 3


ಮೇಲ್ಮನವಿ ತಿರಸ್ಕರಿಸಿದ ಸಿಡಬ್ಲ್ಯುಎಂಎ » 4

# ಚನ್ನಮ್ಮ ಪುಣ್ಯಾರಾಧನೆಯಲ್ಲಿ ಜನಸ್ತೋಮ



ಸಮಾಧಿ ಮುಂದೆ ನಿಂತು ಭಾವುಕರಾದ ದೇವೇಗೌಡರು



- ನಾಡಿನ ವಿವಿಧೆಡೆಯಿಂದ ಲಕ್ಷಕ್ಕೂ ಅಧಿಕ ಮಂದಿ ಭಾಗಿ
- ರಾಜ್ಯಕೀಯ ಗಣ್ಯರು, ಸ್ವಾಮೀಜಿಗಳ ಸಾನಿಧ್ಯ

**ಹೊಳೆನರಸೀಪುರ : ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಧರ್ಮಪತ್ನಿ ಶ್ರೀಮತಿ ಚನ್ನಮ್ಮ ಅವರ 11ನೇ ದಿನದ ಉತ್ತರ ಕ್ರಿಯಾಧಿಯಲ್ಲಿ ಜಿಲ್ಲೆ ಸೇರಿ ರಾಜ್ಯದ ನಾನಾ ಭಾಗಗಳಿಂದ ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿ ಜನರು, ರಾಜಕೀಯ ಗಣ್ಯರು, ಮಠಾಧೀಶರು ಮೃತರ ಆತ್ಮಕ್ಕೆ ಶಾಂತಿ ಕೋರಿ, ಪುಣ್ಯನಮನ ಸಲ್ಲಿಸಿದರು.**

ಗುರುವಾರ ತಾಲ್ಲೂಕಿನ ಮಾವಿನ ಕೆರೆ ರಂಗ ನಾಥಸ್ವಾಮಿ ಬೆಟ್ಟದ ತಪ್ಪಲಿನಲ್ಲಿರುವ ಚನ್ನಮ್ಮ ಅವರ ಸಮಾಧಿಗೆ ಹೆಚ್. ಡಿ.ದೇವೇಗೌಡರ ಸೇರಿ ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಸಂಬಂಧಿಕರು, ಸ್ವಾಮೀಜಿಗಳು, ಗಣ್ಯರು ಪೂಜೆ ಸಲ್ಲಿಸಿದರು.

ಕುಟುಂಬದ ಸದಸ್ಯರಿಗಿತಂಲೂ ಮೊದಲೇ ಸಮಾಧಿ ಸ್ಥಳಕ್ಕೆ ಆಗಮಿಸಿದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಮೌನವಾಗಿ ಪತ್ನಿಯ ಸಮಾಧಿ ಪಕ್ಕದಲ್ಲಿ ಕುಳಿತು, ಚನ್ನಮ್ಮ ಅವರನ್ನು ನೆನೆದು ಕಣ್ಣೀರಿಟ್ಟರು. ಬಳಿಕ ಪೂಜೆ ಸಲ್ಲಿಸಿ ಸಮಾಧಿಗೆ ದುಂಡು ಮಲ್ಲಿಗೆ ಹೂವಿನ ಹಾರ ಅರ್ಪಿಸಿ ಭಾವುಕರಾಗಿ ನಮಿಸಿದರು.

ಮಧ್ಯಾಹ್ನ 12 ಗಂಟೆ ನಂತರ ಸಮಾಧಿ ಸ್ಥಳದಲ್ಲಿ ನಡೆದ ಪೂಜಾ ಕಾರ್ಯದಲ್ಲಿ ಪುರೋಹಿತರು ಮಂತ್ರೋಚ್ಚಾರಣೆ ನಡಸಿದರೆ, ಸಂಪ್ರದಾಯದಂತೆ ಕುಟಂಬಸ್ಥರು ಪೂಜೆ ನೆರವೇರಿಸಿದರು. ಬಳಿಕ ಚನ್ನಮ್ಮ ಅವರಿಗೆ ಪ್ರಿಯವಾದ ಬಗೆ ಬಗೆಯ ತಿಂಡಿ, ತಿನಿಸುಗಳನ್ನು ಮನೆಯಿಂದ ತಯಾರಿಸಿಕೊಂಡು ಬಂದ ಕುಟುಂಬಸ್ಥರು ಸಮಾಧಿ ಎದುರು ಎಡೆ ಇಟ್ಟು ನಮನ ಸಲ್ಲಿಸಿದರು. ಬಳಿಕ ದೇವೇಗೌಡರು, ಹೆಚ್.ಡಿ. ಕುಮಾರಸ್ವಾಮಿ, ಹೆಚ್.ಡಿ.ರೇವಣ್ಣ ಸೇರಿ ಕುಟುಂಬದವರು ಜನರೊಂದಿಗೆ ಕುಳಿತು ಸಹಪಂಕ್ತಿ ಭೋಜನ ಮಾಡಿದರು. ಅದಕ್ಕೂ ಮೊದಲು ಹರದನಹಳ್ಳಿಯ ದೇವೇಗೌಡ ಅವರ ನಿವಾಸ ಹಾಗು ಹೊಳೆನರಸೀಪುರದ ಹೆಚ್.ಡಿ.ರೇವಣ್ಣ ಅವರ ಮನೆಯಲ್ಲೂ ನೈವೇದ್ಯ, ಪೂಜಾ ಕಾರ್ಯಗಳು ನಡೆದವು. ಈ ವೇಳೆ ಕುಟುಂಬಸ್ಥರು ಮಾತ್ರ ಭಾಗಿಯಾಗಿದ್ದರು.

ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ಕೆಂಗೇರಿಯ ವಿಶ್ವ ಒಕ್ಕಲಿಗರ ಮಠದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ಉತ್ತರ ಕ್ರಿಯಾದಿ ಕಾರ್ಯಗಳು ಜರುಗಿದವು.





### ಹೂವಿನ ಅಲಂಕಾರ, ಮಂಟಪ ನಿರ್ಮಾಣ

ಪುಣ್ಯಕಾರ್ಯದ ಅಂಗವಾಗಿ ಸಮಾಧಿ ಸುತ್ತಲೂ ವಿಶೇಷ ಹೂವಿನ ಅಲಂಕಾರ ಜೊತೆಗೆ ಮಂಟಪ ನಿರ್ಮಾಣ ಮಾಡಲಾಗಿತ್ತು. ಸಮಾಧಿ ಎದುರು ಚನ್ನಮ್ಮ ಅವರ ಬೃಹತ್ ಭಾವಚಿತ್ರವನ್ನು ಹಾಕಲಾಗಿತ್ತು. ಸ್ಥಳದಲ್ಲಿ ಒಂದು ರೀತಿಯ ಭಕ್ತಿಪೂರ್ವಕ ವಾತಾವರಣ ನಿರ್ಮಾಣವಾಗಿದ್ದರಿಂದ ಆಗಮಿಸಿದ ಪ್ರತಿಯೊಬ್ಬರು ನಮಸ್ಕರಿಸಿ, ಸಮಾಧಿಗೆ ಪುಷ್ಪ ನಮನ ಸಲ್ಲಿಸಿದರು.

### ಅತ್ತೆಗೆ ಚಕ್ಕುಲಿ, ಮೈಸೂರು ಪಾಕ್ ಅಂದ್ರೆ ಇಷ್ಟ

ಹಾಸನ: ಅತ್ತೆಗೆ ಚಕ್ಕುಲಿ, ಮೈಸೂರು ಪಾಕ್ ಅಂದ್ರೆ ತುಂಬಾ ಇಷ್ಟ ಎಂದು ಸೊಸೆ ಭವಾನಿ ರೇವಣ್ಣ ಅವರು ಭಾವುಕರಾದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಮ್ಮ ಹಾಸನಕ್ಕೆ ಬಂದಾಗ ನನ್ನ ಜೊತೆಯೇ ಇರುತ್ತಿದ್ದರು. ದೇವರ ಮನೆಗೆ ಹೋದರೆ ಎರಡ್ಮೂರು ಗಂಟೆಯಾದರೂ ಪೂಜೆ ಮುಗಿಯುತ್ತಿರಲಿಲ್ಲ. ನಾವು ಅಮ್ಮ ಯಾವ ದೇವರ ಜೊತೆ ಮಾತನಾಡಿದ್ರಿ ಎಂದರೆ ನಕ್ಕು ಸುಮ್ಮನಾಗುತ್ತಿದ್ದರು. ರೇವಣ್ಣ ಅವರ ಪಾಲಿಗೆ ತಂದೆ-ತಾಯಿ ಎಂದರೆ ದೇವರ ಸಮಾನ. ದೇವಾಲಯಕ್ಕೆ ಹೋಗಿ ಪೂಜೆ ಮಾಡಿಸಿ ಬಂದರೆ ನಾನಿದ್ದರೂ ಮೊದಲು ಅಮ್ಮನಿಗೆ ಪ್ರಸಾದ ಕೊಡುತ್ತಿದ್ದರು. ನಮಗೆ ಎಲ್ಲಾ ವಿಷಯದಲ್ಲಿ ಅವರೇ ಮಾರ್ಗದರ್ಶನ ಮಾಡುತ್ತಿದ್ದರು. ಅವರು ಯಾವುದೇ ರಾಜಕಾರಣಿ ಅಲ್ಲ, ಸಿನಿಮಾ ಸ್ಟಾರ್ ಅಲ್ಲ, ಆದರೂ ಅವರು ಗಳಿಸಿರುವ ಪ್ರೀತಿ ದೊಡ್ಡದು ಎಂದರು.

### ಹಲವು ಗಣ್ಯರಿಂದ ನಮನ

ಕೇಂದ್ರ ಸಚಿವ ವಿ.ಸೋಮಣ್ಣ, ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ, ಕೇಂದ್ರ ಮಾಜಿ ಸಚಿವ ಸಿ.ಎಂ.ಇಬ್ರಾಹಿಂ, ಸಂಸದ ಮಲ್ಲೇಶಬಾಬು, ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮಾಜಿ ಸಚಿವರಾದ ಸಿ.ಟಿ.ರವಿ, ಅಶ್ವಥ್ ನಾರಾಯಣ, ಬಂಡೆಪ್ಪ ಕಾಶೆಂಪೂರ್, ಜಿ.ಟಿ.ದೇವೇಗೌಡ, ಸಾ.ರಾ.ಮಹೇಶ್, ಮಾಜಿ ಸಂಸದ ಪ್ರತಾಪ್ ಸಿಂಹ, ಶಾಸಕರಾದ ಸುರೇಶ್ ಬಾಬು, ಬಿ.ಎಲ್. ಶಂಕರ್, ಕರೆಯಮ್ಮ, ಭಾಗೀರಥಿ ಸೇರಿ ಬಹುತೇಕ ಜೆಡಿಎಸ್ ಶಾಸಕರು, ಮಾಜಿ ಸಚಿವರು ಆಗಮಿಸಿ ಚನ್ನಮ್ಮನವರ ಸಮಾಧಿಗೆ ನಮಿಸಿದರು.

" ರಾಜ್ಯ-ದೇಶವನ್ನು ಪ್ರತಿನಿಧಿಸಿದ ಹೆಚ್.ಡಿ.ದೇವೇಗೌಡ ಅವರ ಎಲ್ಲಾ ಆಗುಹೋಗುಗಳಲ್ಲಿ ಶ್ರೀಮತಿ ಚನ್ನಮ್ಮ ಅವರು ಬೆಂಬಲಿಗರಾಗಿ ನಿಂತು ಅದ್ಭುತ ಕಾರ್ಯಗಳನ್ನು ಮಾಡಿದ್ದಾರೆ. ಆ ತಾಯಿಗೆ ನಮನ ಸಲ್ಲಿಸುವುದು ನಮ್ಮೆಲ್ಲರ ಕರ್ತವ್ಯ. ಇಲ್ಲಿ ಸೇರಿರುವ ಲಕ್ಷಾಂತರ ಜನರನ್ನು ಗಮನಿಸಿದರೆ, ಚನ್ನಮ್ಮ ಅವರು ಕರ್ನಾಟಕದ ಜನರ ಪ್ರೀತಿಯ ತಾಯಿ ಎಂದು ಹೇಳಬಹುದು.

-ಡಿ.ವಿ.ಸದಾನಂದಗೌಡ, ಮಾಜಿ ಮುಖ್ಯಮಂತ್ರಿ

## ರಾಜ್ಯದ ಬರ ಪರಿಸ್ಥಿತಿ ಮನವರಿಕೆಗೆ ಛಲವಾದಿ ಆಗ್ರಹ

• ಪ್ರಜೋದಯ ವರದಿ

**ಹೊಳೆನರಸೀಪುರ:** ನೀರಿನ ಅವಶ್ಯಕತೆ ಇಲ್ಲದಿದ್ದರೂ ತಮಿಳುನಾಡಿನವರು ಪ್ರತಿವರ್ಷ ತಗಾದೆ ತೆಗೆಯುತ್ತಾರೆ. ನಮ್ಮ ಸರ್ಕಾರ ಯಾವ ಕಾರಣಕ್ಕೂ ಮಣಿಯದೆ ರಾಜ್ಯದ ಪರಿಸ್ಥಿತಿಯನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಮನವರಿಕೆ ಮಾಡಿಕೊಡಬೇಕೆಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಆಗ್ರಹಿಸಿದರು.



ತಾಲ್ಲೂಕಿನ ಮಾವಿನಕೆರೆ ಬೆಟ್ಟದ ತಪ್ಪಲಿನಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 145 ವರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಶಿಂಷಾ ವಿದ್ಯುತ್ ಉತ್ಪಾದನಾ ಘಟಕ ಬಂದ್ ಆಗಿದೆ. ರಾಜ್ಯದಲ್ಲಿ ಮಳೆ ಕೊರತೆ ಎಷ್ಟಿದೆ ಎಂಬುದಕ್ಕೆ ಈ ಉದಾಹರಣೆ ಸಾಕು. ಪರಿಸ್ಥಿತಿ ಹೀಗಿದ್ದರೂ ನೀರು ಹರಿಸಲೇಬೇಕೆಂದು ತಮಿಳುನಾಡು ಪಟ್ಟು ಹಿಡಿದಿದೆ. ಸದ್ಯ ಆ ರಾಜ್ಯದಲ್ಲಿ ನೀರಿಗೆ ಅಭಾವವಿಲ್ಲ. ಸಮುದ್ರಕ್ಕೆ ಸೇರಿದರೂ ಪರವಾಗಿಲ್ಲ ಕರ್ನಾಟಕಕ್ಕೆ ತೊಂದರೆ ಕೊಡಬೇಕೆನ್ನುವುದೇ ಅವರ ಉದ್ದೇಶವಾಗಿದೆ ಎಂದು ದೂರಿದರು.

ಈ ವಿಚಾರದಲ್ಲಿ ಬಿಜೆಪಿ, ಜೆಡಿಎಸ್, ಕಾಂಗ್ರೆಸ್ ಒಟ್ಟಾಗಿ ಹೋರಾಟ ಮಾಡಬೇಕು. ಪ್ರಾಧಿಕಾರಕ್ಕೆ ರಾಜ್ಯ ಸರ್ಕಾರ ಮನವರಿಕೆ ಮಾಡುವ ಕೆಲಸ ಮಾಡಬೇಕು. ಪರಿಸ್ಥಿತಿ ಕೈ ಮೀರಿದರೆ ನ್ಯಾಯಾಲಯದ ಮೆಟ್ಟಿಲೇರಬೇಕು. ಯಾವ ಕಾರಣಕ್ಕೂ ತಮಿಳುನಾಡಿಗೆ ಒಂದು ಹನಿ ನೀರು ಬಿಡಬಾರದು. ಒಂದು ವೇಳೆ ನಮ್ಮ ಸರ್ಕಾರ ನೀರು ಹರಿಸಿದರೆ ರೈತರನ್ನು ತೀವ್ರ ಸಂಕಷ್ಟಕ್ಕೆ ಸಿಲುಕಿಸಿದಂತಾಗುತ್ತದೆ ಎಂದರು.

ತಮಿಳುನಾಡಿನ ಉದ್ಧಟತನ ಖಂಡಿಸಿ ಮುಂದಿನ ದಿನಗಳಲ್ಲಿ ಬಿಜೆಪಿ-ಜೆಡಿಎಸ್ ನೇತೃತ್ವದಲ್ಲಿ ರಾಜ್ಯಾದ್ಯಂತ ಪ್ರತಿಭಟನೆ ನಡೆಸಲಾಗುವುದು. ತಜ್ಞರ ಸಲಹೆ ಪಡೆದು ಕಾವೇರಿ ಕೊಳ್ಳದ ರೈತರಿಗೆ ಅನುಕೂಲ ಮಾಡಿಕೊಡುವತ್ತ ಸರ್ಕಾರ ಗಮನ ಹರಿಸಬೇಕು. ತಮಿಳುನಾಡು ಮುಖ್ಯಮಂತ್ರಿ ಜೊತೆ ಸಭೆ ನಡೆಸಿ ಹಿಂಬಾಗಿಲಿನಿಂದ ನೀರು ಹರಿಸಿದರೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅದರ ಪರಿಣಾಮ ಎದುರಿಸಬೇಕಾಗುತ್ತದೆಂದು ಎಚ್ಚರಿಕೆ ನೀಡಿದರು.

## ಸಮಾಧಿ ಸ್ಥಳ ನಾಡಿನ ಜನರಿಗೆ ಅರ್ಪಣೆ : ಹೆಚ್.ಡಿ.ಕೆ.

### ಸಂಸ್ಕೃತ ಪಾಠಶಾಲೆ, ಅನಾಥಾಲಯ, ವೃದ್ಧಾಶ್ರಮ, ಗೋಶಾಲೆ ಸ್ಥಾಪನೆಗೆ ಚಿಂತನೆ

• ಪ್ರಜೋದಯ ವರದಿ

**ಹಾಸನ:** ಅಮ್ಮನ ಸಮಾಧಿ ಸ್ಥಳದಲ್ಲಿ ನಾನಾ ರೀತಿಯ ಜನೋಪಯೋಗಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಅನಾಥ ಮಕ್ಕಳಿಗೆ ಆಶ್ರಯ ಕಲ್ಪಿಸಲಾಗುವುದು, ವೃದ್ಧರಿಗೆ ವೃದ್ಧಾಶ್ರಮ ನಿರ್ಮಿಸುವ ಉದ್ದೇಶವಿದೆ. ಗೋಶಾಲೆ ಸ್ಥಾಪನೆ ಮಾಡಲಾಗುವುದು. ಹಾಗೆಯೇ ಶ್ರೀ ರಂಗನಾಥ ಸ್ವಾಮಿ ಸನ್ನಿಧಿಯಲ್ಲಿ ಸಂಸ್ಕೃತ ಪಾಠಶಾಲೆ ಸ್ಥಾಪನೆ ಮಾಡಲಾಗುವುದು. ಇಲ್ಲಿರುವ ಭೂಮಿಯಲ್ಲಿ ಒಂದು ಅಂಗುಲವನ್ನು ಕೂಡ ನಮ್ಮ ಸ್ವಂತಕ್ಕೆ ಬಳಕೆ ಮಾಡುವುದಿಲ್ಲ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ತಿಳಿಸಿದರು.

### ಜನಸ್ತೋಮ ಕಂಡು ಹೃದಯ ತುಂಬಿದೆ

ನಮ್ಮ ತಾಯಿಯ ಹನ್ನೊಂದನೇ ದಿನದ ಉತ್ತರ ಕ್ರಿಯಾ ವಿಧಿವಿಧಾನದ ಸಂದರ್ಭದಲ್ಲಿ ನಾಡಿನ ಮೂಲೆ ಮೂಲೆಗಳಿಂದ ಬಂದು ಅಮ್ಮನ ಆತ್ಮಕ್ಕೆ ಚಿರಶಾಂತಿ ಕೋರಿದ ಎಲ್ಲರಿಗೂ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಕೃತಜ್ಞತೆ ಸಲ್ಲಿಸಿದ್ದಾರೆ.

ನಮ್ಮ ತಾಯಿ ಸಂಪಾದನೆ ಮಾಡಿರುವ ಪುಣ್ಯವನ್ನು ಇಂದು ಜನರ ರೂಪದಲ್ಲಿ ಕಂಡಿದ್ದೇನೆ. ಇಂದು ಹರಿದು ಬಂದಿರುವ ಜನಸ್ತೋಮವನ್ನು ಕಂಡು ನನ್ನ ಹೃದಯ ತುಂಬಿ ಬಂದಿದೆ. ಇಲ್ಲಿಗೆ ಬಂದು ಅಮ್ಮನ ಆತ್ಮಕ್ಕೆ ಶಾಂತಿ ಕೋರಿದ ಪ್ರತಿಯೊಬ್ಬರನ್ನು ಸ್ಮರಿಸುತ್ತೇನೆಂದು ಕುಮಾರಸ್ವಾಮಿ ಅವರು ಹೇಳಿದರು.



ಚನ್ನಮ್ಮ ಅವರ ಉತ್ತರ ಕ್ರಿಯಾದಿ ವಿಧಿ ವಿಧಾನಗಳು ಪೂರ್ಣಗೊಂಡ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ತಾಯಿ ನಮ್ಮಿಂದ ದೂರವಾಗಿದ್ದಾರೆಂಬ ಭಾವನೆ ನಮ್ಮಲ್ಲಿಲ್ಲ. ನಮ್ಮ ಹೃದಯದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ಅವರ ಹೆಸರಿನಲ್ಲಿ ಈ ಭಾಗವನ್ನು ನಾಡಿನ ಎಲ್ಲಾ ಸಮಾಜದವರಿಗೆ ನೆರವಾಗುವ ನಿಟ್ಟಿನಲ್ಲಿ ಹಲವಾರು ಯೋಜನೆಗಳನ್ನು ಸಮಾಧಿ ಸ್ಥಳದಲ್ಲಿ ಮಾಡಲು ನಿರ್ಧಾರ ಮಾಡಲಾಗಿದೆ. ಈ ಜಾಗವನ್ನು ನಾಡಿನ ಜನರಿಗೆ ಅರ್ಪಣೆ ಮಾಡಬೇಕೆಂದು ಸಹೋದರರು-ಸಹೋದರಿಯರು ಸೇರಿ ತೀರ್ಮಾನ ಮಾಡಿದ್ದೇವೆಂದರು.

ಸಂಕಷ್ಟದಲ್ಲಿರುವ ಕುಟುಂಬಗಳಿಗೆ, ರೈತರು, ಯುವಕರು, ಮಹಿಳೆಯರು, ವೃದ್ಧರಿಗೆ ನೆರಳಾಗುವ ನಿಟ್ಟಿನಲ್ಲಿ ಕೆಲವು ಕಾರ್ಯಗಳನ್ನು ತರಬೇಕೆಂದು ಈಗಾಗಲೇ ನಮ್ಮ ಕುಟುಂಬದಲ್ಲಿ ತೀರ್ಮಾನ ಮಾಡಿದ್ದೇವೆ. ನಾವು ಕೈಗೊಳ್ಳುವ ಕಾರ್ಯಕ್ರಮಗಳು ಈ ಭೂಮಿ ಇರುವವರೆಗೂ ಶಾಶ್ವತವಾಗಿ ನಡೆಯಬೇಕೆಂಬ ಭಾವನೆಯನ್ನು ಹೊಂದಿದ್ದೇವೆ. ಆ ನಿಟ್ಟಿನಲ್ಲಿ ದೇಶದಲ್ಲೇ ವಿಶೇಷವಾದ ರೀತಿಯಲ್ಲಿ ಈ ಸ್ಥಳಲ್ಲಿ ಕಾರ್ಯಕ್ರಮ ರೂಪಿಸಲು ಚಿಂತನೆ ನಡೆಸಿದ್ದೇವೆ. ಎಷ್ಟು ಎಕರೆ ಎಂಬುದು

» ನಾಲ್ಕನೇ ಪುಟದಲ್ಲಿ

## ಚನ್ನಮ್ಮ ಮಾತೃತ್ವ ಗುಣಕ್ಕೆ ಸಾಕ್ಷಿಯಾದ ಕಾರ್ಯಕ್ರಮ

• ಪ್ರಜೋದಯ ವರದಿ

**ಹೊಳೆನರಸೀಪುರ:** ಯಾರೇ ಮನೆಗೆ ಬಂದರೂ ಹೊಟ್ಟೆ ತುಂಬ ಊಟ ಬಡಿಸಿ ಅನ್ನಪೂರ್ಣೆ ಎಂದೇ ಕರೆಸಿಕೊಂಡಿದ್ದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಧರ್ಮಪತ್ನಿ ಶ್ರೀಮತಿ ಚನ್ನಮ್ಮ ಅವರ ಆರಾಧನಾ ಕಾರ್ಯಕ್ರಮವನ್ನು ಅವರ ಕುಟುಂಬಸ್ಥರು ಅಚ್ಚುಕಟ್ಟು ಊಟದ ವ್ಯವಸ್ಥೆ ಮೂಲಕ ಯಶಸ್ವಿಗೊಳಿಸಿದರು.

ರಾಜ್ಯದ ರಾಜಕೀಯ, ಸಾಮಾಜಿಕ ಇತಿಹಾಸದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರ ಕುಟುಂಬಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಈ ಬೃಹತ್ ಆಲದ ಮರಕ್ಕೆ ತಾಯಿ ಬೇರಿನಂತೆ ನೆರಳಾಗಿ ನಿಂತವರು ಶ್ರೀಮತಿ ಚನ್ನಮ್ಮ. ಅವರ ಮಾತೃತ್ವ ಮತ್ತು ಉದಾರ ಗುಣವನ್ನು ಉತ್ತರ ಕ್ರಿಯೆ ಕಾರ್ಯಕ್ರಮ ಸಾಕ್ಷೀಕರಿಸಿದಂತೆ ಇತ್ತು. ಚನ್ನಮ್ಮ ದೇವೇಗೌಡರು ಆಧ್ಯಾತ್ಮಿಕ ಚಿಂತನೆಯುಳ್ಳವರಾಗಿದ್ದರು. ಪೂಜೆ-ಪುನಸ್ಕಾರ, ದೇವತಾ ಕಾರ್ಯಗಳು ಮತ್ತು ದಾನ-ಧರ್ಮಗಳಲ್ಲಿ ಅವರು ಸದಾ ಮುಂದಿದ್ದರು. ದೇವೇಗೌಡರ ಸುದೀರ್ಘ ರಾಜಕೀಯ ಜೀವನದ ಏಳು-ಬೀಳುಗಳಲ್ಲಿ, ಅವರ ಕುಟುಂಬ ಎದುರಿಸಿದ ಸವಾಲುಗಳಲ್ಲಿ ಚನ್ನಮ್ಮನವರು ಮಾಡಿದ ದೇವತಾ ಕಾರ್ಯಗಳ ಪುಣ್ಯ ಮತ್ತು ಅವರ ತಪಃಶಕ್ತಿ ಪ್ರಬಲವಾದ ಶ್ರೀರಕ್ಷೆಯಾಗಿ ನಿಂತಿದೆ. ಎಲ್ಲದಕ್ಕೂ ಮಾವಿನಕೆರೆ ಶ್ರೀ ರಂಗನಾಥ ಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ನಡೆದ ಉತ್ತರ ಕ್ರಿಯಾದಿ ಕಾರ್ಯಕ್ರಮ ಉದಾಹರಣೆಯಾಗಿತ್ತು.

ಸುಮಾರು ಒಂದೂವರೆ ಲಕ್ಷಕ್ಕೂ ಹೆಚ್ಚು ಜನರು, ಅಭಿಮಾನಿಗಳು ನಾಡಿನ ವಿವಿಧ ಭಾಗಗಳಿಂದ ಆಗಮಿಸಿದ್ದ ಗಣ್ಯರು ವೈಕುಂಠ ಸಮಾರಾಧನೆಯಲ್ಲಿ ಪಾಲ್ಗೊಂಡು ಮೃತರ ಆತ್ಮಕ್ಕೆ ಪ್ರಾರ್ಥಿಸಿದರು. ಅಷ್ಟೊಂದು ಬೃಹತ್ ಸಂಖ್ಯೆಯ ಜನಸಂದಣಿ ಇದ್ದರೂ ಆಹಾರ, ಕುಡಿಯುವ ನೀರು, ಆಸನದ ವ್ಯವಸ್ಥೆಯನ್ನು ಅತ್ಯಂತ ಶಿಸ್ತುಬದ್ಧವಾಗಿ ಮಾಡಲಾಗಿತ್ತು.

**ರೇವಣ್ಣ ಓಡಾಟದ ಬೆರಗು**

ಗುರುವಾರ ಬೆಳಿಗ್ಗೆ 11ರ ವೇಳೆಗೆ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಸಮಾಧಿ ಸ್ಥಳಕ್ಕೆ ಆಗಮಿಸಿ ಪೂಜಾ ವಿಧಿ ವಿಧಾನದಲ್ಲಿ ಪಾಲ್ಗೊಂಡು ತಕ್ಷಣ ಊಟದ ಹಾಲ್ ಗೇಟ್‌ನಲ್ಲಿ ನಿಂತು ಊಟ ಮಾಡುವಂತೆ ಎಲ್ಲರನ್ನೂ ಆಹ್ವಾನಿಸುತ್ತಾ ನಿಂತರು. ಹತ್ತಿರದಲ್ಲೇ ನಿಂತಿದ್ದ ಪೊಲೀಸ್ ಸಿಬ್ಬಂದಿ, ಹೋಮ್ ಗಾಡ್ಸ್‌ಗಳನ್ನು ಕೈಮುಗಿದು ಕರೆದು ಊಟ ಮಾಡುವಂತೆ ವಿನಂತಿಸಿಕೊಂಡರು. ಆ ಮೂಲಕ ತಾಯಿಯ ಅನ್ನ ಪ್ರಸಾದ ಸಂಪ್ರದಾಯಕ್ಕೆ ಗೌರವ ನೀಡಿದರು.

**14 ಊಟದ ಕೌಂಟರ್**

ಚನ್ನಮ್ಮ ಅವರ ಆರಾಧನಾ ಮಹೋತ್ಸವಕ್ಕೆ ಬರುವ ಜನರಿಗೆ ತೊಂದರೆ ಆಗದಂತೆ ಒಟ್ಟು 16 ಊಟದ ಕೌಂಟರ್ ತೆರೆಯಲಾಗಿತ್ತು. ಸಾಮಾನ್ಯ ಜನರು, ಮಹಿಳೆ ಯರು, ವಿಐಪಿಗಳಿಗೆ ಪ್ರತ್ಯೇಕ ಕೌಂಟರ್ ತೆರೆಯಲಾಗಿತ್ತು. ಅವುಗಳ ಪಕ್ಕದಲ್ಲೇ ಅಡುಗೆ ತಯಾರಿಸಲಾಗಿತ್ತು. ಊಟ ಬಡಿಸಲು ಸ್ವಚ್ಛತೆಗೆ ಪ್ರತ್ಯೇಕ ಜನರನ್ನು ನೇಮಕ ಮಾಡಿದ್ದರಿಂದ ಸಣ್ಣ ರೀತಿಯಲ್ಲೂ ಗೊಂದಲ ಆಗಲಿಲ್ಲ. ಬಂದವರೆಲ್ಲಾ ನೆಮ್ಮದಿ ಯಿಂದ ಊಟಮಾಡಿ ಖುಷಿ ಖುಷಿಯಿಂದ ತೆರಳಿದರು.

1500 ಬಾಣಸಿಗರು ತರೇಹವಾರಿ ಅಡುಗೆ ತಯಾರು ಮಾಡಿದ್ದರು. ಕಜ್ಜಾಯ, ಲಾಡು, ಹೋಳಿಗೆ, ಹಲ್ವಾ, ಪಾಯಸ, ವಡೆ, ಪುಳಿಯೊಗರೆ, ಬಿಸಿಬೇಳೆ ಬಾತ್ ಸೇರಿ ವಿವಿಧ ಬಗೆಯ ತಿನಿಸುಗಳ ತಯಾರು ಮಾಡಲಾಗಿತ್ತು. ಒಂದು ಪಂಕ್ತಿಗೆ ಸುಮಾರು 15 ಸಾವಿರ ಜನ ಕೂರಲು ವ್ಯವಸ್ಥೆ ಮಾಡಲಾಗಿತ್ತು.



ಅಚ್ಚುಕಟ್ಟು ಊಟದ ವ್ಯವಸ್ಥೆ

### ಟ್ರಾಫಿಕ್ ಜಾಮ್: ವಾಹನ ಸವಾರರ ಪರದಾಟ

**ಹೊಳೆನರಸೀಪುರ:** ಚನ್ನಮ್ಮ ಅವರ ಉತ್ತರಕ್ರಿಯೆಯಲ್ಲಿ ಪಾಲ್ಗೊಳ್ಳಲು ರಾಜ್ಯದ ವಿವಿಧ ಭಾಗಗಳಿಂದ ಅಪಾರ ಸಂಖ್ಯೆಯ ಜನರು ವಾಹನಗಳಲ್ಲಿ ಆಗಮಿಸಿದ್ದರಿಂದ ಕಾರ್ಯಕ್ರಮ ಆಯೋಜಿಸಿದ್ದ ಮಾವಿನಕೆರೆ-ಹರದನಹಳ್ಳಿ ಭಾಗದಲ್ಲಿ ಕಿಲೋ ಮೀಟರ್‌ಗಟ್ಟಲೆ ಸಂಚಾರ ದಟ್ಟಣೆ ಉಂಟಾಯಿತು. ಪ್ರಮುಖ ರಸ್ತೆಗಳಲ್ಲಿ ವಾಹನಗಳು ನಿಧಾನವಾಗಿ ಚಲಿಸಿದ ಪರಿಣಾಮ ವಾಹನ ಸವಾರರು ದೀರ್ಘಕಾಲ ಪರದಾಡುವಂತಾಯಿತು.

ಸಂಚಾರ ದಟ್ಟಣೆ ನಿಯಂತ್ರಿಸಲು ಜಿಲ್ಲಾ ಪೊಲೀಸ್ ಇಲಾಖೆ ವ್ಯಾಪಕ ವ್ಯವಸ್ಥೆ ಮಾಡಿದ್ದರೂ, ಒಂದೇ ಸಮಯದಲ್ಲಿ ಹೆಚ್ಚಿನ ಸಂಖ್ಯೆಯ ವಾಹನಗಳು ಆಗಮಿಸಿದ್ದರಿಂದ ಕೆಲಕಾಲ ರಸ್ತೆಗಳಲ್ಲಿ ವಾಹನಗಳ ಸಾಲು ಕಂಡು ಬಂತು. ಸಂಚಾರ ಸುಗಮಗೊಳಿಸಲು ಪೊಲೀಸರು ನಿರಂತರವಾಗಿ ಕಾರ್ಯನಿರ್ವಹಿಸಿದರು.

ಕಾರ್ಯಕ್ರಮಕ್ಕೆ ಆಗಮಿಸಿದ ವಾಹನಗಳಿಗಾಗಿ ಸ್ಥಳದಿಂದ ಸುಮಾರು ಒಂದೂವರೆ ಕಿಲೋ ಮೀಟರ್ ದೂರದಲ್ಲಿ ವಿಶಾಲ ವಾಹನ ನಿಲುಗಡೆ ವ್ಯವಸ್ಥೆ ಕಲ್ಪಿಸಲಾಗಿತ್ತು. ಅಲ್ಲಿ ವಾಹನಗಳನ್ನು ನಿಲ್ಲಿಸಿ ನಡೆದುಕೊಂಡು ಕಾರ್ಯಕ್ರಮ ಸ್ಥಳಕ್ಕೆ ತೆರಳಿದರು. ಜನಸಂದಣಿ ನಿಯಂತ್ರಣಕ್ಕಾಗಿ ಪ್ರಮುಖ ಪ್ರವೇಶ ಮಾರ್ಗಗಳಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಅಧಿಕಾರಿಗಳು ಹಾಗು ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಆದರೂ ಹರದನಹಳ್ಳಿ-ಮಾವಿನಕೆರೆ ನಡುವಿನ ರಸ್ತೆಯಲ್ಲಿ ವಾಹನ ಹಾಗು ಜನರ ಸಂಚಾರ ಹೆಚ್ಚಿದ್ದರಿಂದ ಕೆಲಕಾಲ ಸಂಚಾರ ದಟ್ಟಣೆ ಉಂಟಾಗಿ ವಾಹನಗಳ ಸಂಚಾರ ನಿಧಾನಗತಿಯಲ್ಲಿ ಸಾಗಿತು. ಮುನ್ನೆಚ್ಚರಿಕೆ ಕ್ರಮವಾಗಿ ಮಾರ್ಗ ಬದಲಾವಣೆ ಮಾಡಿದ್ದರೂ ಹೆಚ್ಚಿನ ಸಂಖ್ಯೆಯ ವಾಹನಗಳಲ್ಲಿ ಜನರು ಆಗಮಿಸಿದ್ದರಿಂದ ಟ್ರಾಫಿಕ್ ಸಮಸ್ಯೆ ಹೆಚ್ಚಾಗಿ ಕಂಡು ಬಂತು.



## ತಮಿಳುನಾಡಿಗೆ ನೀರು ಹರಿಸಿ ವಾಟರ್ ಮ್ಯಾನ್ ಆಗ್ಬೇಡಿ: ಸಿ.ಟಿ. ರವಿ

• ಪ್ರಜೋದಯ ವರದಿ

**ಹೊಳೆನರಸೀಪುರ:** ನಮ್ಮ ನೀರು-ನಮ್ಮ ಹಕ್ಕು ಎಂದು ಪಾದಯಾತ್ರೆ ಮಾಡಿದ್ದ ಡಿ.ಕೆ.ಶಿವಕುಮಾರ್ ಅವರು ತಮಿಳುನಾಡಿಗೆ ಕಾವೇರಿ ನೀರು ಹರಿಸಿ ವಾಟರ್‌ಮ್ಯಾನ್ ಆಗಬಾರದು, ಮುಖ್ಯಮಂತ್ರಿಯಾಗಿ ತಮ್ಮ ಬದ್ಧತೆ ಪ್ರದರ್ಶಿಸಬೇಕೆಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರು ಆಗ್ರಹಿಸಿದರು.

ತಾಲ್ಲೂಕಿನ ಮಾವಿನಕೆರೆ ಬೆಟ್ಟದ ತಪ್ಪಲಿನಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಬಲಾಢ್ಯ ಮುಖ್ಯಮಂತ್ರಿ ಇದ್ದಾರೆಂದು ಭಾವಿಸಿದ್ದೇವೆ. ಮಳೆ ಅಭಾವದಿಂದಾಗಿ ಜಲಾಶಯಗಳು ಭರ್ತಿಯಾಗದೆ ಬೆಂಗಳೂರಿಗೆ ಕುಡಿಯುವ ನೀರಿನ ಸಮಸ್ಯೆಯಾಗುತ್ತದೆ ಎಂದು ಮುಖ್ಯಮಂತ್ರಿಯೇ ಹೇಳಿದ್ದಾರೆ. ಕುಡಿಯುವ ಉದ್ದೇಶದಿಂದ ಮಾತ್ರ ಕಾಲುವೆ ಮೂಲಕ ನೀರು ಹರಿಸಲಾಗುತ್ತಿದೆ. ಪರಿಸ್ಥಿತಿ ಕಠಿಣವಾಗಿರುವಾಗ ಸರ್ಕಾರ ಕೈಗೊಳ್ಳುವ ನಿರ್ಧಾರ ಸ್ಪಷ್ಟವಾಗಿರಬೇಕೆಂದರು.

ನಮ್ಮ ನೀರು-ನಮ್ಮ ಹಕ್ಕು ಎನ್ನುವ ನಿಮ್ಮ ಧ್ವನಿಗೆ ಬೆಂಬಲವಾಗಿ ನಾವು ನಿಲ್ಲುತ್ತೇವೆ. ಮುಖ್ಯಮಂತ್ರಿಯಾಗಿ ರಾಜ್ಯದ ರೈತರ ಹಿತ ಕಾಪಾಡುವ ಜವಾಬ್ದಾರಿ ನಿಮ್ಮ ಮೇಲಿದೆ. ನಮ್ಮ ರೈತರಿಗೆ ನೀರು ಕೊಡದೆ, ಬೆಂಗಳೂರಿಗೂ ಕಲ್ಪಿಸದೆ ತಮಿಳುನಾಡಿಗೆ ಹರಿಸಿದರೆ ನೀವು ವಾಟರ್‌ಮ್ಯಾನ್ ಆಗಬೇಕಾಗುತ್ತದೆಂದು ಎಚ್ಚರಿಕೆ ನೀಡಿದರು.



" ಪ್ರಧಾನ ಮಂತ್ರಿ ಹುದ್ದೆ ಏರಿದಾಗಲೂ ಹಳ್ಳಿಯ ಮಹಿಳೆ ಸರಳವಾಗಿ ಬದುಕಿ ಅದರಲ್ಲೇ ಸಾರ್ಥಕತೆ ಪಡೆದವರು ಶ್ರೀಮತಿ ಚನ್ನಮ್ಮನವರು. ನಿಧನರಾದ 11 ನೇ ದಿನ ಉತ್ತರ ಕ್ರಿಯೆ ಮಾಡುವುದು ಒಕ್ಕಲಿಗ ಸಮುದಾಯದ ಸಂಪ್ರದಾಯ. ಅವರ ಆತ್ಮಕ್ಕೆ ಶಾಂತಿ ಸಿಗಲಿ, ಕೈಲಾಸವಾಸಿಯಾಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

-ಸಿ.ಟಿ.ರವಿ, ವಿಧಾನ ಪರಿಷತ್ ಸದಸ್ಯ

ತಮ್ಮ ವಿರುದ್ಧ ರಾಜ್ಯಾದ್ಯಂತ ನಡೆಯುತ್ತಿರುವ ಪ್ರತಿಭಟನೆ ಸಂಬಂಧ ಪ್ರತಿಕ್ರಿಯಿಸಿದ ಅವರು, ಭಾರತವನ್ನು ಪಾಕಿಸ್ತಾನ ಮಾಡಬೇಕೆಂಬುದು ಕೆಲವರ ಕನಸು. ಆ ಕನಸು ಯಾವತ್ತಿಗೂ ನನಸಾಗುವುದಿಲ್ಲ. ಭಾರತ ಹೇಗೆ ಶತ್ರುವೋ ಪಿಒಕೆ ಸಹ ಅದೇ ರೀತಿ ಶತ್ರುವೆಂದು ಪಾಕಿಸ್ತಾನದವರು

» ನಾಲ್ಕನೇ ಪುಟದಲ್ಲಿ

CMYK CMYK CMYK CMYK

# ರಾಗಿಣಿ ದ್ವಿವೇದಿ ಹೇಳಿದ್ದೇನು?

**ಚಿತ್ರಮಂದಿರಗಳಿಗೆ ಪ್ರೇಕ್ಷಕರು ಬರುತ್ತಿಲ್ಲವೆಂಬ ಹೊತ್ತಲ್ಲಿ ಸರ್ಕಾರಿ ನ್ಯಾಯಬೆಲೆ ಅಂಗಡಿ ಗೆಲ್ಲುತ್ತೆ ಅನಿಸುತ್ತದೆಯೇ?**

ಇದೇ ಜುಲೈ 31ರಂದು ಸರ್ಕಾರಿ ನ್ಯಾಯಬೆಲೆ ಅಂಗಡಿ ತೆರೆಗಪ್ಪಳಿಸಲಿದ್ದು, ನಾಯಕ ನಟಿ ರಾಗಿಣಿ ದ್ವಿವೇದಿ ಈಟಿವಿ ಭಾರತ ವರದಿಗಾರ ರವಿಕುಮಾರ್ ಎಂ.ಕೆ. ಜೊತೆಗಿನ ಸಂದರ್ಶನದಲ್ಲಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

ಅತ್ಯುತ್ತಮ ಅಭಿನಯ ಹಾಗೂ ಗ್ಲ್ಯಾಮರಸ್ ಲುಕ್ ನಿಂದ ಕನ್ನಡ, ತೆಲುಗು ಹಾಗೂ ಮಲಯಾಳಂ ಸಿನಿಮಾಗಳಲ್ಲಿ ಬೇಡಿಕೆ ಹೊಂದಿರುವ ನಟಿ ರಾಗಿಣಿ ದ್ವಿವೇದಿ. ಗ್ಲ್ಯಾಮರ್ ರೋಲ್‌ಗಳಿಂದಲೇ ಇಂಪ್ರೆಸ್ ಮಾಡುತ್ತಿದ್ದ ರಾಗಿಣಿ ದ್ವಿವೇದಿ ಅವರೀಗ ಬಿಗ್ ಸ್ಕ್ರೀನ್‌ನಲ್ಲಿ ಹಳ್ಳಿಗಾಡಿನ ಸಾಮಾನ್ಯ ಮಹಿಳೆಯಾಗಿ ಕಾಣಿಸಿಕೊಳ್ಳಲು ಸಜ್ಜಾಗಿದ್ದಾರೆ. ಕುಮಾರ್ ಬಂಗಾರಪ್ಪ ಜೊತೆ ತೆರೆ ಹಂಚಿಕೊಂಡಿರುವ ರಾಗಿಣಿ ದ್ವಿವೇದಿ ತಮ್ಮ ಸರ್ಕಾರಿ ನ್ಯಾಯಬೆಲೆ ಅಂಗಡಿ ಸಿನಿಮಾ ಅನುಭವವನ್ನು ಈಟಿವಿ ಭಾರತದೊಂದಿಗಿನ ಸಂದರ್ಶನದಲ್ಲಿ ಹಂಚಿಕೊಂಡಿದ್ದಾರೆ.

ಸರ್ಕಾರಿ ನ್ಯಾಯಬೆಲೆ ಅಂಗಡಿ ಸಿನಿಮಾದ ಪಾತ್ರಕ್ಕೆ ನಿಮ್ಮ ಸಿದ್ಧತೆ ಹೇಗಿತ್ತು?



ಕಲಾವಿದೆಯಾಗಿ ವಿಭಿನ್ನ ರೀತಿಯ ಪಾತ್ರಗಳನ್ನು ಮಾಡಬೇಕೆನ್ನುವ ಆಸೆ ಮೊದಲಿನಿಂದಲೂ ಇದೆ. ನೀವು ನೋಡಿರಬಹುದು, ನನ್ನ 15 ವರ್ಷದ ಸಿನಿಮಾ ಕೆರಿಯರ್ ನಲ್ಲಿ ಬೋಲ್ಡ್, ಗ್ಲ್ಯಾಮರ್, ಆ್ಯಕ್ಷನ್, ಐತಿಹಾಸಿಕ, ಹಳ್ಳಿ ಹುಡುಗಿ ಸೇರಿದಂತೆ ಭಿನ್ನ ವಿಭಿನ್ನ ಪಾತ್ರಗಳನ್ನು ನಿರ್ವಹಿಸಿದ್ದೇನೆ. ಸವಾಲುಗಳನ್ನು ಎದುರಿಸಲು ಇಚ್ಛಿಸುತ್ತೇನೆ. ಕಲಾವಿದೆಯಾಗಿ ವಿಭಿನ್ನ ಸಿನಿಮಾಗಳಲ್ಲಿ ಕಾಣಿಸಿಕೊಳ್ಳೋದು ಬಹಳ ಖುಷಿ ಕೊಡುವ ವಿಚಾರ. ಈ ಸಿನಿಮಾದ ಪಾತ್ರದಲ್ಲಿ ಪ್ರೀತಿ, ಹೋರಾಟ, ಎಮೋಷನ್ ಎಲ್ಲವೂ ಇದೆ. 90ರ ಕಾಲಘಟ್ಟದ ಹಿನ್ನೆಲೆಯಲ್ಲಿ ಕಥೆ ಸಾಗುತ್ತದೆ. ಕಥೆ ಮತ್ತು ಪಾತ್ರ ನನ್ನನ್ನು ಆಕರ್ಷಿಸಿತು. ಕಲಾವಿದರಿಗೆ ಈ ಅಂಶಗಳೇ ಸಾಕು ಒಂದು ಸಿನಿಮಾ ಮಾಡಲು ಎಂದು ತಿಳಿಸಿದರು.

ಪಾತ್ರದಲ್ಲಿ ಎರಡು ಶೇಡ್ ಇದೆ. ನಿಮ್ಮ ಮೇಕ್ ಓವರ್ ಹೇಗಿತ್ತು?

ಬಹಳ ಚೆನ್ನಾಗಿತ್ತು. ಹೆಣ್ಣುಮಕ್ಕಳು ತಮ್ಮ ಜೀವನದಲ್ಲಿ ವಿಭಿನ್ನ ಹಂತಗಳನ್ನು ಎದುರಿಸುತ್ತಾರೆ. ತಾಯಿಯಾಗಿ, ಸಹೋದರಿಯಾಗಿ, ಮಗಳಾಗಿ ವಿವಿಧ ಹಂತದಲ್ಲಿ ವಿಭಿನ್ನ ಪಾತ್ರಗಳನ್ನು ಹೆಣ್ಣು ಮಕ್ಕಳು ತಮ್ಮ ಜೀವನದಲ್ಲಿ ನಿರ್ವಹಿಸುತ್ತಾರೆ. ವೃತ್ತಿಪರ ಮತ್ತು ವೈಯಕ್ತಿಕ ಜೀವನವನ್ನು ಸಮತೋಲನಗೊಳಿಸಬೇಕು. ಈ ಸಿನಿಮದಲ್ಲಿಯೂ ಅದನ್ನೇ ತೋರಿಸಿದ್ದೀವಿ. ಹೋರಾಟವನ್ನು ತೋರಿಸಿದ್ದೀವಿ. ಜೀವನದಲ್ಲಿ ಸಮಸ್ಯೆ ಎದುರಾದ್ರೆ, ನಮ್ಮ ಶ್ರಮವನ್ನು ಬಿಡಬಾರದು ಎಂಬುದನ್ನು ಹೇಳಿದ್ದೇವೆ. ಇದು ಬಹಳ ಸುಂದರ ವಿಷಯ. ಮಂಡ್ಯದಲ್ಲಿ ಶೂಟಿಂಗ್ ನಡೆಸಿದೆವು. ಅಂಬರೀಶ್ ಆಂಕಲ್ ಹುಟ್ಟೂರಿನಲ್ಲಿ ಚಿತ್ರೀಕರಣ ನಡೆಸಿದ್ದು ತುಂಬಾನೇ ಖುಷಿ ಕೊಡ್ತು ಎಂದು ತಿಳಿಸಿದರು.

ಸಾಮಾನ್ಯವಾಗಿ ಸ್ಟುಡಿಯೋ ಅಥವಾ ಫಾರಿನ್ ಲೋಕೇಶನ್‌ಗಳಲ್ಲಿ ನೀವು ಶೂಟಿಂಗ್ ಮಾಡಿದ್ದೀರ. ಈ ಚಿತ್ರಕ್ಕಾಗಿ ಸಂಪೂರ್ಣ ಹಳ್ಳಿಯಲ್ಲೇ ಚಿತ್ರೀಕರಣ ನಡೆಸಿದ್ರಿ. ಅನುಭವ ಹೇಗಿತ್ತು?

ತುಂಬಾನೆ ಚೆನ್ನಾಗಿತ್ತು. ಹಳ್ಳಿ ಜೀವನ ತುಂಬಾನೆ ಚೆನ್ನಾಗಿರುತ್ತದೆ. ಅಲ್ಲಿನ ಸಂಸ್ಕೃತಿ, ಜನರು, ಊಟ, ನಮ್ಮ ಲುಕ್ಸ್ ಎಲ್ಲವೂ ಬಹಳ ಚೆನ್ನಾಗಿತ್ತು. ಮಂಡ್ಯದಲ್ಲಿ 20 ದಿನ ಚಿತ್ರೀಕರಣ ನಡೆಸಿದ್ವಿ. ಎಲ್ಲವೂ ಬಹಳ ಚೆನ್ನಾಗಿತ್ತು ಎಂದು ತಿಳಿಸಿದರು.

ಇತ್ತೀಚೆಗೆ ಕಾಮಾಕ್ಯ ದೇವಸ್ಥಾನಕ್ಕೆ ಹೋಗಿದ್ರಿ. ಈ ಬಗ್ಗೆ ಹೇಳೋದಾದ್ರೆ?

ನಾನು ಮೊದಲಿನಿಂದಲೂ ಕಾಮಾಕ್ಯ ದೇವಸ್ಥಾನಕ್ಕೆ ಭೇಟಿ ಕೊಡುತ್ತಾ ಬಂದಿದ್ದೇನೆ. ಕಾಮಾಕ್ಯ ಮಂದಿರ ಜೊತೆ ಸಾಕಷ್ಟು ಕೆಲಸಗಳನ್ನು ಮಾಡುತ್ತಿದ್ದೇನೆ. ಆಧ್ಯಾತ್ಮಿಕವಾಗಿ ಶಕ್ತರಾಗಿದ್ರೆ, ನಮಗೆ ಬೇಕಾದ ಮತ್ತು ಹೊಸ ವಿಯಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ. ನನ್ನ ಪ್ರೊಡಕ್ಷನ್ ಹೌಸ್, ಸಿನಿಮಾ ಕೆಲಸಗಳು ಸಾಗಿದ್ದು, ದೊಡ್ಡವರ ಆಶೀರ್ವಾದ ಬೇಕು. ಹಾಗಾಗಿ, ಆಗಾಗ್ಗೆ ದೇವಸ್ಥಾನಗಳಿಗೆ ಭೇಟಿ ಕೊಡುತ್ತೇನೆ ಎಂದು ತಿಳಿಸಿದರು.

ನಿಮ್ಮ ಮುಂದಿನ ಸಿನಿಮಾಗಳ್ಯಾವುವು?

ಸದ್ಯ ನನ್ನ ಆರ್ ಡಿ ಹೆಸರಿನ ಪ್ರೊಡಕ್ಷನ್ ಹೌಸ್‌ನ ಕೆಲಸಗಳಲ್ಲಿ ಬ್ಯುಸಿಯಾಗಿದ್ದೇನೆ. ಅದರಲ್ಲಿ ರಾಗಿಣಿ ಐಪಿಎಸ್ 2 ಸಿನಿಮಾ ಸಿದ್ಧತೆ ನಡೆಯುತ್ತಿದೆ. ಜೊತೆಗೆ ಫಿಟ್ ಇಂಡಿಯಾ ಮ್ಯಾರಥಾನ್‌ನಲ್ಲಿ ತೊಡಗಿಸಿಕೊಂಡಿದ್ದೇನೆ. ಈ ಮಧ್ಯೆ ಯೋಗ, ವರ್ಕ್ ಔಟ್, ಟ್ರಾವೆಲ್ ಹಾಗೂ ದೇವಸ್ಥಾನಗಳಿಗೆ ಭೇಟಿ ಕೊಡುತ್ತಿರುತ್ತೇನೆ ಎಂದು ತಿಳಿಸಿದರು.

ಸಿನಿಮಾ ಶೂಟಿಂಗ್ ಮಧ್ಯೆ ಯೋಗ, ಟ್ರಾವೆಲ್ ಮಾಡೋದು ರಾಗಿಣಿ ದ್ವಿವೇದಿ ಅವರಿಗೆ ಎಷ್ಟು ಖುಷಿ ಕೊಡುತ್ತದೆ?

ಬಹಳ ಖುಷಿ ಕೊಡುತ್ತದೆ. ಬಿಡುವು ಸಿಕ್ಕಾಗ ಟ್ರಾವೆಲ್ ಮಾಡೋದು ಅಂದ್ರೆ, ಬಹಳ ಇಷ್ಟ. ಇದರ ಜೊತೆಗೆ ಕನ್ನಡ ಹಾಗೂ ಹಿಂದಿ ಸಿನಿಮಾದ ಮಾತುಕತೆ ಆಗುತ್ತಿದೆ. ಸದ್ಯದಲ್ಲೇ ಘೋಷಿಸಲಿದ್ದೇವೆ ಎಂದು ಮಾಹಿತಿ ನೀಡಿದರು.

ಚಿತ್ರಮಂದಿರಗಳಿಗೆ ಪ್ರೇಕ್ಷಕರು ಬರುತ್ತಿಲ್ಲ ಎಂಬ ಮಾತಿದೆ. ನಿಮ್ಮ ಸಿನಿಮಾ ಎಷ್ಟರ ಮಟ್ಟಿಗೆ ಪ್ರೇಕ್ಷಕರನ್ನು ರೀಚ್ ಆಗುತ್ತೆ ಎಂದನಿಸುತ್ತದೆ?

ಚಿತ್ರಮಂದಿರಗಳಿಗೆ ಜನ ಬರುತ್ತಿಲ್ಲ ಅನ್ನೋದು ಗೊತ್ತಿದೆ. ಹಾಗಾಗಿ, ನಾವು ಜನರಿಗೆ ಕಂಟೆಂಟ್ ಸಿನಿಮಾಗಳನ್ನು ಕೊಡುವ ಪ್ರಯತ್ನ ಮಾಡಬೇಕು. ಕ್ವಾಲಿಟಿ ಆಫ್ ಕಂಟೆಂಟ್ ಕೊಟ್ರೆ ಜನ ಖಂಡಿತವಾಗಿಯೂ ಬಂದೇ ಬರುತ್ತಾರೆ. ಅದರಂತೆ, ನಮ್ಮ ಈ ಸರ್ಕಾರಿ ನ್ಯಾಯಬೆಲೆ ಅಂಗಡಿ ಸಿನಿಮಾ ಕೈ ಕ್ವಾಲಿಟಿ ಆ್ಯಂಡ್ ಕಂಟೆಂಟ್ ಸಿನಿಮಾ. ಈ ಚಿತ್ರದ ಮೇಲೆ ನನಗೆ ನಂಬಿಕೆ ಇದೆ. ಈ ವರ್ಷ ರಿಲೀಸ್ ಆಗುತ್ತಿರುವ ನನ್ನ ಮೊದಲ ಚಿತ್ರವಿದು. ಪ್ರೇಕ್ಷಕರು,



ಅಭಿಮಾನಿಗಳು ನನ್ನನ್ನು ತುಂಬಾನೇ ಪ್ರೋತ್ಸಾಹಿಸಿದ್ದಾರೆ. ಈಗಲೂ ಅದನ್ನೇ ಕೇಳಿಕೊಳ್ಳುತ್ತೇವೆ. ಚಿತ್ರಮಂದಿರಗಳಿಗೆ ಬನ್ನಿ. ನಮ್ಮ ಸಿನಿಮಾ ವೀಕ್ಷಿಸಿ ಬೆಂಬಲಿಸಿ ಎಂದು ಕೇಳಿಕೊಂಡರು.

ಬಿಡುಗಡೆಗೆ ಸಜ್ಜಾಗಿರುವ ಸರ್ಕಾರಿ ನ್ಯಾಯಬೆಲೆ ಅಂಗಡಿ ಚಿತ್ರದಲ್ಲಿ ರಾಗಿಣಿ ದ್ವಿವೇದಿ ಜೊತೆಗೆ ಕುಮಾರ್ ಬಂಗಾರಪ್ಪ, ಹಿರಿಯ ನಟ ದೊಡ್ಡಣ್ಣ, ನವೀನ್ ಸಜ್ಜು, ಕೃಷ್ಣಪ್ಪ, ರುದ್ರೇಗೌಡ ಸೇರಿ ಅನೇಕ ಕಲಾವಿದರು ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಜಯಶಂಕರ ಟಾಕೀಸ್ ಬ್ಯಾನರ್‌ನಡಿ ಚಿತ್ರವನ್ನು ತೇಜು ಮೂರ್ತಿ ಮತ್ತು ಪದ್ಮಾವತಿ ಚಂದ್ರಶೇಖರ್ ಜಂಟಿಯಾಗಿ ನಿರ್ಮಾಣ ಮಾಡಿದ್ದಾರೆ. ಚಿತ್ರದ ಹಾಡುಗಳಿಗೆ ಅನಂತ್ ಆರ್ಯನ್ ಸಂಗೀತ ಸಂಯೋಜಿಸಿದ್ದಾರೆ. ಬಿ.ರಾಮಮೂರ್ತಿ ಅವರ ಕಥೆ, ಚಿತ್ರಕಥೆ ಮತ್ತು ಸಂಭಾಷಣೆಯಿರುವ ಚಿತ್ರಕ್ಕೆ ಸಾತ್ವಿಕ್ ಪವನ್ ಕುಮಾರ್ ಛಾಯಾಗ್ರಹಣ ಮತ್ತು ನಿರ್ದೇಶನ ಮಾಡಿದ್ದು, ಇದೇ ಜುಲೈ 31ಕ್ಕೆ ಬಿಡುಗಡೆ ಸಿನಿಮಾ ಬಿಡುಗಡೆ ಆಗುತ್ತಿದೆ.

## ಜುಲೈ 31ಕ್ಕೆ ತೆರೆಗೆ ಜಾಲಿ

### ಅಪ್ಪುಗೆ ವಿಶೇಷ ನಮನ, ಮುಗಿಲು ಮುಟ್ಟಿದ ಅಭಿಮಾನಿಗಳ ಕ್ರೇಜ್!

ಬಹುನಿರೀಕ್ಷಿತ ಕನ್ನಡ ಸಿನಿಮಾ ಜಾಲಿ ಜುಲೈ 31ರಂದು ರಾಜ್ಯಾದ್ಯಂತ ಅದ್ದೂರಿಯಾಗಿ ತೆರೆಕಾಣುತ್ತಿದೆ. ಈ ಚಿತ್ರದಲ್ಲಿ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರಿಗೆ ಸಲ್ಲಿಸಿರುವ ವಿಶೇಷ ಗೌರವವನ್ನು ಕಣ್ತುಂಬಿಕೊಳ್ಳಲು ಅಭಿಮಾನಿಗಳು ಕಾತರರಾಗಿದ್ದಾರೆ. ಬೆಂಗಳೂರು ಮತ್ತು ಮೈಸೂರಿನಂತಹ ಪ್ರಮುಖ ನಗರಗಳಲ್ಲಿ ಅಡ್ವಾನ್ಸ್ ಬುಕಿಂಗ್ ಈಗಾಗಲೇ ಭರ್ಜರಿಯಾಗಿ ಆರಂಭವಾಗಿದೆ. ಈ ಸೀಸನ್‌ನಲ್ಲಿ ಸ್ಯಾಂಡಲ್‌ವುಡ್ ಪ್ರೇಕ್ಷಕರಿಗೆ ಇದು ನಿಜಕ್ಕೂ ದೊಡ್ಡ ಹಬ್ಬವಾಗಿದ್ದು, ಮುಂಜಾನೆಯ ಶೋಗಳಿಗೆ ರಾಜ್ಯಾದ್ಯಂತ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.

ಕರಾವಳಿ ಮತ್ತು ಉತ್ತರ ಕರ್ನಾಟಕ ಭಾಗದಲ್ಲೂ ಸಿನಿಮಾ ಅಬ್ಬರಿಸಲು ಸಜ್ಜಾಗಿದ್ದು, ಹೆಚ್ಚಿನ ಸಂಖ್ಯೆಯ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿದೆ. ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳು ಮತ್ತು ಚಿತ್ರಮಂದಿರಗಳ ಕೌಂಟರ್‌ಗಳಲ್ಲಿ ಅಭಿಮಾನಿಗಳು ಈಗಲೇ ಟಿಕೆಟ್ ಬುಕ್ ಮಾಡಿಕೊಳ್ಳಬಹುದು. ಮುಂಜಾನೆಯ ಶೋಗಳಿಗೆ ಇರುವ ಭಾರಿ ಬೇಡಿಕೆ ನೋಡಿದರೆ, ಮೊದಲ ದಿನವೇ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಧೂಳೆಬ್ಬಿಸುವುದು ಗ್ಯಾರಂಟಿ ಎನ್ನಲಾಗುತ್ತಿದೆ. ಅಭಿಮಾನಿಗಳ ಸುರಕ್ಷತೆಗಾಗಿ ಪ್ರಮುಖ ಕೇಂದ್ರಗಳಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದ್ದು, ಸೋಶಿಯಲ್ ಮೀಡಿಯಾದಲ್ಲಿ ಚಿತ್ರದ ಟ್ರೈಲರ್ ಸಖತ್ ವೈರಲ್ ಆಗುತ್ತಿದೆ.

**ಜಾಲಿ ಅಡ್ವಾನ್ಸ್ ಬುಕಿಂಗ್ ಮತ್ತು ಕರ್ನಾಟಕ ಥಿಯೇಟರ್ ಲಿಸ್ಟ್ ಅಪ್‌ಡೇಟ್**

ಜಾಲಿ ಸಿನಿಮಾದ ಕ್ರೇಜ್ ಒಂದೆಡೆಯಾದರೆ, ಇತ್ತ ಸ್ಯಾಂಡಲ್‌ವುಡ್‌ನ ಇತರ ಅಪ್‌ಡೇಟ್‌ಗಳು ಕೂಡ ಸದ್ದು ಮಾಡುತ್ತಿವೆ. ರಾಕಿಂಗ್ ಸ್ಟಾರ್ ಯಶ್ ಅವರ ಮುಂದಿನ ಗ್ಲೋಬಲ್ ಪ್ರಾಜೆಕ್ಟ್ ಬಗ್ಗೆ ಕುತೂಹಲ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಕಿಚ್ಚ ಸುದೀಪ್ ಮತ್ತು ದರ್ಶನ್ ಅವರ ಸಿನಿಮಾಗಳ ಕೆಲಸಗಳು ಕೂಡ ವೇಗವಾಗಿ ಸಾಗುತ್ತಿವೆ. ಇನ್ನು ರಿಷಬ್ ಶೆಟ್ಟಿ ಅವರ ಹೊಸ ಅನೌನ್ಸ್ ಮೆಂಟ್‌ಗಳು ಅಭಿಮಾನಿಗಳಲ್ಲಿ ಸಂಚಲನ ಮೂಡಿಸಿವೆ. ಒಟ್ಟಾರೆಯಾಗಿ ಭಾರತೀಯ ಚಿತ್ರರಂಗದಲ್ಲಿ ಕನ್ನಡ ಸಿನಿಮಾಗಳ ಪ್ರಭಾವ ಎಷ್ಟಿದೆ ಎಂಬುದಕ್ಕೆ ಈ ಬೆಳವಣಿಗೆಗಳೇ ಸಾಕ್ಷಿ.

**ಅಪ್ಪುಗೆ ವಿಶೇಷ ನಮನ: ಜುಲೈ 31ರ ಮೊದಲ ದಿನದ ಶೋಗಳ ಹವಾ**


ಈ ಸಿನಿಮಾದಲ್ಲಿ ಪುನೀತ್ ರಾಜ್‌ಕುಮಾರ್ ಅವರಿಗೆ ಸಲ್ಲಿಸಿರುವ ವಿಶೇಷ ನಮನವೇ ಪ್ರೇಕ್ಷಕರಿಗೆ ದೊಡ್ಡ ಆಕರ್ಷಣೆ. ಅಪ್ಪು ಅವರ ನೆನಪಿಗಾಗಿ ಚಿತ್ರತಂಡ ಕೆಲವು ಭಾವನಾತ್ಮಕ ದೃಶ್ಯಗಳನ್ನು ಸೇರಿಸಿದ್ದು, ಇದು ಸಿನಿಮಾ ಪ್ರೇಮಿಗಳ ಮನಸ್ಸಿಗೆ ಹತ್ತಿರವಾಗಲಿದೆ. ಮೊದಲ ದಿನದ ಫ್ಯಾನ್ ಶೋಗಳು ಮುಂಜಾನೆಯೇ ಆರಂಭವಾಗಲಿದ್ದು, ಈಗಾಗಲೇ ಟಿಕೆಟ್‌ಗಳು ಸೋಲ್ಡ್ ಔಟ್ ಆಗುತ್ತಿವೆ ಎಂದು ಚಿತ್ರಮಂದಿರದ ಮಾಲೀಕರು ತಿಳಿಸಿದ್ದಾರೆ.

ಪ್ರೇಕ್ಷಕರು ತಮ್ಮ ಜಿಲ್ಲೆಯ ಚಿತ್ರಮಂದಿರಗಳ ನಿಖರ ಸಮಯವನ್ನು ಒಮ್ಮೆ ಪರಿಶೀಲಿಸಿಕೊಳ್ಳುವುದು ಉತ್ತಮ. ಇನ್ನು ತಮಿಳು ಮತ್ತು ತೆಲುಗು ಚಿತ್ರರಂಗದಲ್ಲೂ ಈ ವಾರ ಸಾಕಷ್ಟು ಬಿಡುಗಡೆಗಳಿದ್ದು, ಸಿನಿಮಾ ರಂಗ ಗಿಜಿಗುಡುತ್ತಿದೆ. ಮೊದಲ ವಾರಾಂತ್ಯದ ನಂತರ ಬಾಕ್ಸ್ ಆಫೀಸ್ ಕಲೆಕ್ಷನ್ ಬಗ್ಗೆ ಹೆಚ್ಚಿನ ಮಾಹಿತಿ ಸಿಗಲಿದೆ. ಸಿನಿಮಾದ ಕಂಪ್ಲೀಟ್ ರಿವ್ಯೂಗಾಗಿ ನಮ್ಮ ಪೇಜ್ ಫಾಲೋ ಮಾಡಿ. ಈ ಜುಲೈ ತಿಂಗಳ ಬಿಡುಗಡೆಯಲ್ಲಿ ಜಾಲಿ ಹೊಸ ದಾಖಲೆ ಬರೆಯಲಿದೆ ಎಂಬುದು ಗಾಂಧಿನಗರದ ತಜ್ಞರ ಲೆಕ್ಕಾಚಾರ.



## ಥಿಯೇಟರ್‌ಗಳಲ್ಲಿ ದೃಶ್ಯವೈಭವ!

### ರಾವಣನ ಅಬ್ಬರ, ರಾಮನ ತ್ಯಾಗ, ಸೀತೆಯ ಪ್ರೀತಿ... ನಿರೀಕ್ಷೆ ಹೆಚ್ಚಿಸಿದ ಟ್ರೇಲರ್




ಟಿಕೆಟ್ ಬುಕ್ ಮಾಡಲು ಮರೆಯದಿರಿ! ಕರ್ನಾಟಕದ ಸಿನಿಪ್ರೇಮಿಗಳಿಗೆ ಈಗ ಹಬ್ಬದ ಸಮಯ! ಬಹುನಿರೀಕ್ಷಿತ ರಾಮಾಯಣ ಚಿತ್ರದ ಟ್ರೈಲರ್ ಜುಲೈ 30 ರಂದು ಚಿತ್ರಮಂದಿರಗಳಲ್ಲಿ ಅದ್ದೂರಿಯಾಗಿ ಬಿಡುಗಡೆಯಾಗಿದೆ. ವಿಶೇಷವೆಂದರೆ, ಸ್ಪೈಡರ್ ಮ್ಯಾನ್ ಸಿನಿಮಾದ ಆರಂಭಿಕ ಶೋಗಳ ಜೊತೆಗೆ ಈ ಟ್ರೈಲರ್ ಪ್ರದರ್ಶನಗೊಳ್ಳಲಿದೆ. ಹಾಲಿವುಡ್ ಆಕ್ಷನ್ ಮತ್ತು ಭಾರತೀಯ ಪುರಾಣಗಳ ಈ ಅಪರೂಪದ ಸಂಗಮ ಅಭಿಮಾನಿಗಳಲ್ಲಿ ಭಾರಿ ಕುತೂಹಲ ಮೂಡಿಸಿದೆ. ಆನ್‌ಲೈನ್‌ನಲ್ಲಿ ಬರುವ ಮೊದಲೇ ಬೆಳ್ಳಿಪರದೆಯ ಮೇಲೆ ಈ ದೃಶ್ಯವೈಭವವನ್ನು ಕಣ್ತುಂಬಿಕೊಳ್ಳಲು ಫ್ಯಾನ್ಸ್ ತುದಿಗಾಲಲ್ಲಿ ನಿಂತಿದ್ದಾರೆ.

ಬೆಂಗಳೂರು ಮತ್ತು ಮೈಸೂರಿನ ಪ್ರಮುಖ ಮಲ್ಟಿಪ್ಲೆಕ್ಸ್‌ಗಳಲ್ಲಿ ಮುಂಜಾನೆ 6:00 ಗಂಟೆಯಿಂದಲೇ ಶೋಗಳು ಆರಂಭವಾಗಲಿವೆ ಎಂದು ಖಚಿತಪಡಿಸಲಾಗಿದೆ. ಸಿನಿಮಾ ಕ್ರೇಜ್ ಹೆಚ್ಚಿಸಲು ಈ ಮುಂಜಾನೆಯ ಪ್ರದರ್ಶನಗಳನ್ನು ಆಯೋಜಿಸಲಾಗಿದೆ. ಟಿಕೆಟ್‌ಗಳು ಕ್ಷಣಾರ್ಧದಲ್ಲಿ ಸೋಲ್ಡ್ ಔಟ್ ಆಗುವ ಸಾಧ್ಯತೆ ಇರುವುದರಿಂದ ಈಗಲೇ ಬುಕ್ ಮಾಡುವುದು ಉತ್ತಮ. ಮೊಬೈಲ್ ನಲ್ಲಿ ಲೀಕ್ ಆದ ವಿಡಿಯೋಗಳನ್ನು ನೋಡುವ ಬದಲು, ಥಿಯೇಟರ್‌ನ ದೊಡ್ಡ ಪರದೆಯ ಮೇಲೆ ಈ ಅನುಭವ ಪಡೆಯುವುದೇ ಬೇರೆ ಮಜಾ.

ಮಂಗಳವಾರ ಬಿಡುಗಡೆಯಾಗಲಿರುವ ಈ ಟ್ರೈಲರ್ 2 ಮತ್ತು 3 ಎರಡೂ ಫಾರ್ಮ್ಯಾಟ್‌ಗಳಲ್ಲಿ ಲಭ್ಯವಿರಲಿದೆ. ಚಿತ್ರದ ಹೈ-ಬಜೆಟ್ ವಿಶುವಲ್ ಎಫೆಕ್ಟ್ಸ್‌ಗಳನ್ನು ಸವಿಯಲು ಪ್ರೀಮಿಯಂ ಸ್ಕ್ರೀನ್ ಗಳು ಹೇಳಿ ಮಾಡಿಸಿದಂತಿವೆ. ಟಿಕೆಟ್ ಬುಕ್ ಮಾಡುವ ಮುನ್ನ ಬುಕಿಂಗ್ ಆ್ಯಪ್‌ಗಳಲ್ಲಿ ತಾಂತ್ರಿಕ ವಿವರಗಳನ್ನು ಒಮ್ಮೆ ಪರಿಶೀಲಿಸಿಕೊಳ್ಳಿ. ಇದರಿಂದ ನೀವು ಈ ಬಹುನಿರೀಕ್ಷಿತ ಸಿನಿಮಾದ ಅತ್ಯುತ್ತಮ ದೃಶ್ಯ ಅನುಭವವನ್ನು ಪಡೆಯಬಹುದು.

ಟ್ರೈಲರ್ ಆನ್‌ಲೈನ್‌ನಲ್ಲಿ ಮುಂಜಾನೆ 4:15ಕ್ಕೆ ಬಿಡುಗಡೆಯಾಗುವ ನಿರೀಕ್ಷೆಯಿದ್ದರೂ, ಥಿಯೇಟರ್‌ನಲ್ಲಿ ಸಿಗುವ ಆವೃತ್ತಿಯೇ ವಿಭಿನ್ನವಾಗಿರಲಿದೆ. ವರದಿಗಳ ಪ್ರಕಾರ, ಬೆಳ್ಳಿಪರದೆಯ ಆವೃತ್ತಿಯಲ್ಲಿ ಹೆಚ್ಚಿನ ದೃಶ್ಯಗಳು ಅಥವಾ ವಿಶೇಷ ಸೌಂಡ್ ಮಿಕ್ಸಿಂಗ್ ಇರಲಿದೆ. ನೂರಾರು ಅಭಿಮಾನಿಗಳ ಜೊತೆ ಕುಳಿತು ಟ್ರೈಲರ್ ನೋಡುವುದೇ ಒಂದು ಸಂಭ್ರಮ. ಇಂತಹ ದೊಡ್ಡ ಸಿನಿಮಾಗಳ ಮೊದಲ ಝಲಕ್ ನೋಡುವಾಗ ಸಿಗುವ ಕಿಕ್ ಆನ್‌ಲೈನ್‌ನಲ್ಲಿ ಸಿಗಲು ಸಾಧ್ಯವಿಲ್ಲ.

ಹೊಸ ಶೋಗಳ ಅಪ್‌ಡೇಟ್‌ಗಾಗಿ ಬುಕಿಂಗ್ ಸೈಟ್‌ಗಳ ನೋಟಿಫಿಕೇಶನ್ ಆನ್ ಮಾಡಿಕೊಳ್ಳಿ. ಕರ್ನಾಟಕದಲ್ಲಿ ಸೂಪರ್ ಹೀರೋ ಮತ್ತು ಪುರಾಣ ಆಧಾರಿತ ಸಿನಿಮಾಗಳಿಗೆ ಭಾರಿ ಬೇಡಿಕೆಯಿದೆ. ಈ ಅಪರೂಪದ ಕಾಂಬಿನೇಷನ್ ಚಿತ್ರರಂಗದಲ್ಲಿ ಹೊಸ ಸಂಚಲನ ಮೂಡಿಸಿದೆ. ಸೋಶಿಯಲ್ ಮೀಡಿಯಾದಲ್ಲಿ ಸ್ಪಾಯ್ಲರ್‌ಗಳು ಹರಿದಾಡುವ ಮೊದಲೇ, ಥಿಯೇಟರ್‌ನಲ್ಲಿ ಈ ದೃಶ್ಯ ವೈಭವವನ್ನು ಕಣ್ತುಂಬಿಕೊಳ್ಳಲು ಸಜ್ಜಾಗಿ.

## ಜುಲೈ 31ಕ್ಕೆ ಭಾರ್ಗವ ಅಬ್ಬರ

### ಉಪೇಂದ್ರ ಸಿನಿಮಾ ನೋಡಲು ಮುಗಿಬಿದ್ದ ಫ್ಯಾನ್ಸ್, ಅಡ್ವಾನ್ಸ್ ಬುಕ್ಕಿಂಗ್ ಜೋರು!

ರಿಯಲ್ ಸ್ಟಾರ್ ಉಪೇಂದ್ರ ಅಭಿಮಾನಿಗಳಿಗೆ ಈಗ ಹಬ್ಬದ ಸಂಭ್ರಮ. ಜುಲೈ 31ರಂದು ತೆರೆಕಾಣಲಿರುವ ಭಾರ್ಗವ ಚಿತ್ರಕ್ಕಾಗಿ ಫ್ಯಾನ್ಸ್ ಕಾತರದಿಂದ ಕಾಯುತ್ತಿದ್ದಾರೆ. ಮೊನ್ನೆಯಿಂದಲೇ ಕರ್ನಾಟಕದ ಪ್ರಮುಖ ನಗರಗಳಲ್ಲಿ ಅಡ್ವಾನ್ಸ್ ಬುಕ್ಕಿಂಗ್ ಅಧಿಕೃತವಾಗಿ ಶುರುವಾಗಿದೆ. ಬೆಂಗಳೂರು ಮತ್ತು ಮೈಸೂರಿನ ಬಹುತೇಕ ಚಿತ್ರಮಂದಿರಗಳಲ್ಲಿ ಈಗಾಗಲೇ ಟಿಕೆಟ್‌ಗಳು ವೇಗವಾಗಿ ಸೋಲ್ಡ್ ಔಟ್ ಆಗುತ್ತಿವೆ. ಈ ಹೈ-ವೋಲ್ಟೇಜ್ ಆಕ್ಷನ್ ಡ್ರಾಮಾ ಮೂಲಕ ಉಪ್ಪಿ ಮತ್ತೆ ಅಬ್ಬರಿಸಲು ಸಜ್ಜಾಗಿದ್ದಾರೆ. ಮುಂಜಾನೆಯ ಶೋಗಳಿಗಾಗಿ ಅಭಿಮಾನಿಗಳು ಮುಗಿಬಿದ್ದು ಟಿಕೆಟ್ ಬುಕ್ ಮಾಡುತ್ತಿದ್ದು, ಮೊದಲ ವಾರಾಂತ್ಯದಲ್ಲೇ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಧೂಳೆಬ್ಬಿಸುವ ಮುನ್ಸೂಚನೆ ಸಿಕ್ಕಿದೆ.

ಸೆನ್ಸಾರ್ ಮಂಡಳಿಯಿಂದ ಗ್ರೀನ್ ಸಿಗ್ನಲ್ ಪಡೆದಿರುವ ಈ ಚಿತ್ರದ ಒಟ್ಟು ಅವಧಿ 2 ಗಂಟೆ 35 ನಿಮಿಷಗಳು. ಬೆಂಗಳೂರು, ಮೈಸೂರು ಹಾಗೂ ಕರಾವಳಿ ಭಾಗ ಸೇರಿದಂತೆ ರಾಜ್ಯಾದ್ಯಂತ ಭರ್ಜರಿಯಾಗಿ ಸಿನಿಮಾ ಬಿಡುಗಡೆಯಾಗುತ್ತಿದೆ. ಬುಕ್ ಮೈಶೋ ಮತ್ತು ಪೇಟಿಎಂ ಪ್ಲಾಟ್‌ಫಾರ್ಮ್‌ಗಳಲ್ಲಿ ಈಗಾಗಲೇ ನೂರಾರು ಸ್ಕ್ರೀನ್‌ಗಳ ಲಿಸ್ಟ್ ಲಭ್ಯವಿದ್ದು, ನಾಳೆ ಸಂಜೆಯ ವೇಳೆಗೆ ಚಿತ್ರಮಂದಿರಗಳ ಸಂಖ್ಯೆ ಮತ್ತಷ್ಟು ಹೆಚ್ಚಾಗಲಿದೆ. ರಾಜ್ಯದ ಮೂಲೆ ಮೂಲೆಗೂ ಸಿನಿಮಾ ತಲುಪುವಂತೆ ವಿತರಣಾ ತಂಡ ಪ್ಲಾನ್ ಮಾಡಿಕೊಂಡಿದೆ.



ಉಪೇಂದ್ರ ನಟನೆಯ ಭಾರ್ಗವ ಅಡ್ವಾನ್ಸ್ ಬುಕ್ಕಿಂಗ್ ಟ್ರೆಂಡ್ ಹೇಗಿದೆ?

ಮಂಗಳೂರು ಮತ್ತು ಹುಬ್ಬಳ್ಳಿಯ ಚಿತ್ರಮಂದಿರಗಳಲ್ಲಿ ಅಭಿಮಾನಿಗಳ ಸಂಘಗಳಿಗಾಗಿ ವಿಶೇಷ ಶೋಗಳನ್ನು ಆಯೋಜಿಸಲಾಗಿದೆ. ಅತ್ಯಾಧುನಿಕ ಸೌಂಡ್ ಮತ್ತು ವಿಶುವಲ್ ಕ್ವಾಲಿಟಿಯೊಂದಿಗೆ ಪ್ರೀಮಿಯಂ ಫಾರ್ಮ್ಯಾಟ್‌ನಲ್ಲಿ ಸಿನಿಮಾ ಪ್ರದರ್ಶನಗೊಳ್ಳಲಿದೆ. ಉಪ್ಪಿ ಸಿನಿಮಾಗೆ ಇರುವ ಭಾರಿ ಕ್ರೇಜ್ ನಡುವೆಯೂ ಟಿಕೆಟ್ ದರಗಳು ಜನಸಾಮಾನ್ಯರಿಗೆ ಎಟುಕುವಂತೆಯೇ ಇವೆ. ಚಿತ್ರದ ಬಿಡುಗಡೆಯ ತಂತ್ರಗಾರಿಕೆ ನೋಡಿದರೆ ಮೊದಲ ದಿನವೇ ದಾಖಲೆ ಮಟ್ಟದ ಕಲೆಕ್ಷನ್ ಆಗುವ ಸಾಧ್ಯತೆಯಿದೆ ಎಂದು ಸಿನಿಮಾ ವಿಶ್ಲೇಷಕರು ಅಂದಾಜಿಸಿದ್ದಾರೆ. ಮಲ್ಟಿಪ್ಲೆಕ್ಸ್‌ಗಳಲ್ಲಿ ನೆಚ್ಚಿನ ಸೀಟುಗಳನ್ನು ಕಾಯ್ದಿರಿಸಲು ಫ್ಯಾನ್ಸ್ ಈಗಲೇ ಮುಗಿಬೀಳುತ್ತಿದ್ದು, ಸ್ಯಾಂಡಲ್‌ವುಡ್‌ನಲ್ಲಿ ಈಗ ಭಾರ್ಗವದ್ದೇ ಹವಾ ಶುರುವಾಗಿದೆ.

ಭಾರ್ಗವ ಚಿತ್ರಕ್ಕೆ ಸಿಗುತ್ತಿರುವ ರೆಸ್ಪಾನ್ಸ್ ನೋಡಿದರೆ ಕನ್ನಡ ಚಿತ್ರರಂಗದಲ್ಲಿ ಉಪೇಂದ್ರ ಅವರ ಕ್ರೇಜ್ ಎಳ್ಳಷ್ಟೂ ಕಡಿಮೆಯಾಗಿಲ್ಲ ಎಂಬುದು ಸಾಬೀತಾಗಿದೆ. ವಾರಾಂತ್ಯದಲ್ಲಿ ಚಿತ್ರಮಂದಿರಗಳು ಹೌಸ್‌ಫುಲ್ ಆಗುವ ಲಕ್ಷಣಗಳಿದ್ದು, ಕೊನೆಯ ಕ್ಷಣದ ನಿರಾಸೆ ತಪ್ಪಿಸಲು ಪ್ರೇಕ್ಷಕರು ಆನ್‌ಲೈನ್‌ನಲ್ಲಿ ಶೋ ಟೈಮಿಂಗ್ ಚೆಕ್ ಮಾಡಿಕೊಳ್ಳುವುದು ಉತ್ತಮ. ಜುಲೈ 31ರಂದು ಅದ್ದೂರಿಯಾಗಿ ತೆರೆಗೆ ಬರಲಿರುವ ಈ ಸಿನಿಮಾ ಪ್ರೇಕ್ಷಕರಿಗೆ ಕಂಪ್ಲೀಟ್ ಎಂಟರ್‌ಟೈನ್‌ಮೆಂಟ್ ನೀಡೋದರಲ್ಲಿ ಡೌಟೇ ಇಲ್ಲ. ಈ ಸೀಸನ್‌ನಲ್ಲಿ ಬಾಕ್ಸ್ ಆಫೀಸ್ ಲೆಕ್ಕಾಚಾರವನ್ನೇ ಈ ಸಿನಿಮಾ ಬದಲಿಸುವ ನಿರೀಕ್ಷೆಯಿದೆ.

## ಪಿಕ್ಚರ್ ಟ್ರೈಲರ್ ನೋಡಿ ಫಿದಾ ಆದ ಪ್ರೇಕ್ಷಕರು

### ಆಗಸ್ಟ್ 7ಕ್ಕೆ ಕರಾವಳಿ ಸೊಗಡಿನ ಈ ಸಿನಿಮಾ ಬಿಡುಗಡೆ!

ಕರಾವಳಿ ಪ್ರತಿಭೆಗಳ ಬಹುನಿರೀಕ್ಷಿತ ದ್ವಿಭಾಷಾ ಚಿತ್ರ ಪಿಕ್ಚರ್ ಸಿನಿಮಾದ ಟ್ರೈಲರ್ ಅಧಿಕೃತವಾಗಿ ಬಿಡುಗಡೆಯಾಗಿದೆ. ತುಳು ಮತ್ತು ಕನ್ನಡದಲ್ಲಿ ಮೂಡಿಬಂದಿರುವ ಈ ಸಿನಿಮಾ ಆಗಸ್ಟ್ 7 ರಂದು ಚಿತ್ರಮಂದಿರಗಳಲ್ಲಿ ಅದ್ದೂರಿಯಾಗಿ ತೆರೆಕಾಣಲಿದೆ. ಸದ್ಯ ಕರ್ನಾಟಕದಾದ್ಯಂತ ಸೋಷಿಯಲ್ ಮೀಡಿಯಾದಲ್ಲಿ ಈ ಚಿತ್ರದ ಕನ್ನಡ ವರ್ಷನ್ ಸಖತ್ ಟ್ರೆಂಡ್ ಆಗುತ್ತಿದ್ದು, ಸಿನಿಮಾದ ಮೇಕಿಂಗ್ ಮತ್ತು ವಿಭಿನ್ನ ಕಥಾಹಂದರಕ್ಕೆ ಪ್ರೇಕ್ಷಕರು ಫಿದಾ ಆಗಿದ್ದಾರೆ. ಕರಾವಳಿ ಭಾಗದ ಸಿನಿಮಾಗಳು ಈಗ ರಾಜ್ಯಾದ್ಯಂತ ದೊಡ್ಡ ಮಟ್ಟದಲ್ಲಿ ಸದ್ದು ಮಾಡುತ್ತಿರುವುದಕ್ಕೆ ಈ ಚಿತ್ರವೇ ಸಾಕ್ಷಿ.

ಪಿಕ್ಚರ್ ಸಿನಿಮಾ ವಿಶೇಷವಾಗಿ ಮಂಗಳೂರು ಮತ್ತು ಉಡುಪಿ ಭಾಗದ ಪ್ರೇಕ್ಷಕರನ್ನು ಗಮನದಲ್ಲಿಟ್ಟುಕೊಂಡು ಸಿದ್ಧವಾಗಿದೆ. ದ್ವಿಭಾಷೆಯಲ್ಲಿ ಸಿನಿಮಾ ಮಾಡಿರುವುದು ಸ್ಥಳೀಯ ಸಂಸ್ಕೃತಿಯನ್ನು ಎಲ್ಲರಿಗೂ ತಲುಪಿಸಲು ಸಹಕಾರಿಯಾಗಿದೆ. ತುಳು ಚಿತ್ರರಂಗದಲ್ಲಿ ಇಷ್ಟು ಉನ್ನತ ಮಟ್ಟದ ಪ್ರೊಡಕ್ಷನ್ ವ್ಯಾಲ್ಯೂ ನೋಡಿ ಅಭಿಮಾನಿಗಳು ಖುಷಿಯಾಗಿದ್ದಾರೆ. ಕೇವಲ ಕರಾವಳಿ ಮಾತ್ರವಲ್ಲದೆ, ಬೆಂಗಳೂರು ಮತ್ತು ಮೈಸೂರಿನ ಪ್ರೇಕ್ಷಕರು ಕೂಡ ಕನ್ನಡ ಟ್ರೈಲರ್ ನೋಡಿ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ. ಸ್ಥಳೀಯ ಪ್ರತಿಭೆಗಳಿಗೆ ದೊಡ್ಡ ಮಟ್ಟದ ವೇದಿಕೆ ಕಲ್ಪಿಸಿಕೊಡುವಲ್ಲಿ ಈ ಸಿನಿಮಾ ಯಶಸ್ವಿಯಾಗಿದೆ.

**ವೈರಲ್ ಆಗುತ್ತಿದೆ ಪಿಕ್ಚರ್ ಟ್ರೈಲರ್: ಪ್ರೇಕ್ಷಕರಲ್ಲಿ ಹೆಚ್ಚಿದ ಕುತೂಹಲ**

ನಿರ್ದೇಶಕ ಸ್ವಪ್ನಿಲ್ ಶ್ರೀವಾಸ್ತವ್ ಅವರು ಹೊಸಬರು ಮತ್ತು ಅನುಭವಿ ಕಲಾವಿದರ ಕಾಂಬಿನೇಷನ್‌ನಲ್ಲಿ ಈ ಚಿತ್ರವನ್ನು ಅದ್ಭುತವಾಗಿ ಕಟ್ಟಿಕೊಟ್ಟಿದ್ದಾರೆ.

ಈಗ ಬಿಡುಗಡೆಯಾಗಿರುವ ಟ್ರೈಲರ್ ಕುತೂಹಲ ಕೆರಳಿಸುವಂತಿದ್ದು, ಸಿನಿಮಾದ ಮೇಲಿನ ನಿರೀಕ್ಷೆಯನ್ನು ದುಪ್ಪಟ್ಟು ಮಾಡಿದೆ. ಇನ್ನು ಸಿನಿಮಾದ ಹಿನ್ನೆಲೆ ಸಂಗೀತ ಪ್ರತಿ ದೃಶ್ಯಕ್ಕೂ ಜೀವ ತುಂಬಿದಂತಿದೆ. ಕರಾವಳಿಯ ಸೊಗಡಿಗೆ ತಕ್ಕಂತೆ ಮೂಡಿಬಂದಿರುವ ಸಂಗೀತಕ್ಕೆ ಕೇಳುಗರು ಫುಲ್ ಮಾರ್ಕ್ಸ್ ನೀಡಿದ್ದಾರೆ. ತಾಂತ್ರಿಕವಾಗಿ ಸಿನಿಮಾ ತುಂಬಾ ಅಚ್ಚುಕಟ್ಟಾಗಿ ಮೂಡಿಬಂದಿರುವುದು ತಂಡದ ಶ್ರಮವನ್ನು ಎತ್ತಿ ತೋರಿಸುತ್ತಿದೆ.




ಕರ್ನಾಟಕದ ಪ್ರಮುಖ ನಗರಗಳಲ್ಲಿ ಶೀಘ್ರದಲ್ಲೇ ಸಿನಿಮಾದ ಅಡ್ವಾನ್ಸ್ ಬುಕಿಂಗ್ ಆರಂಭವಾಗಲಿದೆ. ಚಿತ್ರಮಂದಿರಗಳ ಪಟ್ಟಿಗಾಗಿ ಅಭಿಮಾನಿಗಳು ಅಧಿಕೃತ ಸೋಷಿಯಲ್ ಮೀಡಿಯಾ ಪೇಜ್‌ಗಳನ್ನು ಗಮನಿಸಬಹುದು. ಕೋಸ್ಟಲ್‌ವುಡ್ ಪ್ರತಿಭೆಗಳು ಮುಖ್ಯವಾಹಿನಿಯ ಕನ್ನಡ ಚಿತ್ರರಂಗಕ್ಕೆ ಲಗ್ಗೆ ಇಡುತ್ತಿರುವುದು ಒಂದು ಮಹತ್ವದ ಬೆಳವಣಿಗೆಯಾಗಿದೆ.

ಈಗಿನ ದಿನಗಳಲ್ಲಿ ಪ್ರಾದೇಶಿಕ ಸಿನಿಮಾಗಳು ಮಲ್ಟಿಪ್ಲೆಕ್ಸ್‌ಗಳಲ್ಲಿ ಹೆಚ್ಚಿನ ಪ್ರಾಮುಖ್ಯತೆ ಪಡೆಯುತ್ತಿದ್ದು, ನೈಜ ಕಥೆಗಳನ್ನು ಇಷ್ಟಪಡುವ ಸಿನಿಮಾ ಪ್ರೇಕ್ಷಕರಿಗೆ ಇದು ಉತ್ತಮ ಆಯ್ಕೆಯಾಗಲಿದೆ.


ಆಗಸ್ಟ್ 7ರ ಬಿಡುಗಡೆ ದಿನಾಂಕ ಹತ್ತಿರವಾಗುತ್ತಿದ್ದಂತೆ ಪಿಕ್ಚರ್ ಸಿನಿಮಾ ದೊಡ್ಡ ಮಟ್ಟದ ಹೈಪ್ ಕ್ರಿಯೇಟ್ ಮಾಡುತ್ತಿದೆ. ಎರಡು ಭಾಷೆಗಳಲ್ಲಿ ಸಿನಿಮಾ ಇರುವುದರಿಂದ ಹೆಚ್ಚಿನ ಜನರನ್ನು ತಲುಪಲು ಸಾಧ್ಯವಾಗುತ್ತಿದೆ.

ನೀವು ತುಳು ಅಥವಾ ಕನ್ನಡ, ಯಾವುದೇ ಭಾಷೆಯ ಸಿನಿಮಾ ಪ್ರೇಮಿಯಾಗಿದ್ದರೂ ಈ ಚಿತ್ರ ನಿಮಗೆ ಹೊಸ ಅನುಭವ ನೀಡುವುದರಲ್ಲಿ ಅನುಮಾನವಿಲ್ಲ. ಟ್ರೈಲರ್‌ಗೆ ಸಿಗುತ್ತಿರುವ ರೆಸ್ಪಾನ್ಸ್ ನೋಡಿದರೆ ಸಿನಿಮಾ ಮೊದಲ ವಾರವೇ ಭರ್ಜರಿ ಕಲೆಕ್ಷನ್ ಮಾಡುವ ಮುನ್ಸೂಚನೆ ನೀಡಿದೆ. ನಿಮ್ಮ ಹತ್ತಿರದ ಚಿತ್ರಮಂದಿರಗಳಲ್ಲಿ ಈ ಕರಾವಳಿಯ ಸೊಗಡಿನ ಚಿತ್ರವನ್ನು ಮಿಸ್ ಮಾಡದೆ ನೋಡಿ.

## ಹಲವು ವರ್ಷಗಳ ನಂತರ ಸ್ಯಾಂಡಲ್ ವುಡ್‌ಗೆ ಕುನಾಲ್ ಗಾಂಜಾವಾಲ

### ಪಾರ್ಟ್ನರ್ ಚಿತ್ರಕ್ಕಾಗಿ ಅಜಯ್ ರಾವ್‌ಗೆ ಹಿನ್ನೆಲೆ ಗಾಯನ!

ಕನ್ನಡ ಸಂಗೀತ ಪ್ರಿಯರ ಒಂದು ಇಡೀ ಪೀಳಿಗೆಗೆ, ತಾಜ್ ಮಹಲ್ ಚಿತ್ರದ ಖುಷಿಯಾಗಿದೆ ಏಕೋ ನಿನ್ನಿಂದಲೆ ಹಾಡಿನ ಕೆಲವು ಸಾಲುಗಳು ಪ್ರೇಮಗೀತೆ, ಕಾಲೇಜು ದಿನಗಳು ಮತ್ತು ಕೃಷ್ಣ ಅಜಯ್ ರಾವ್ ಅವರ ಅತ್ಯಂತ ಸ್ಮರಣೀಯ ಪರದೆಯ ಮೇಲಿನ ಪ್ರದರ್ಶನಗಳನ್ನು ನೆನಪಿಸುತ್ತವೆ. ಬಾಲಿವುಡ್ ಹಿನ್ನೆಲೆ ಗಾಯಕ ಕುನಾಲ್ ಗಂಜಾವಾಲ ಹಾಡಿರುವ ಈ ಹಾಡು ತ್ವರಿತ ಚಾರ್ಟ್‌ಬಸ್ಟರ್ ಆಯಿತು ಮತ್ತು ಕನ್ನಡ ಚಿತ್ರರಂಗದ ಅತ್ಯಂತ ಪ್ರೀತಿಯ ಮೆಲೋಡಿಗಳಲ್ಲಿ ಒಂದಾಗಿದೆ. ಈಗ, ವರ್ಷಗಳ ನಂತರ, ಪ್ರಸಿದ್ಧ ಗಾಯಕ ಕನ್ನಡ ಚಿತ್ರರಂಗಕ್ಕೆ ಮರಳುತ್ತಿದ್ದಾರೆ. ಈ ಬಾರಿಯೂ ಸಹ, ಅಜಯ್ ರಾವ್ ಚಿತ್ರದಲ್ಲಿ ಹಲವು ವರ್ಷಗಳ ನಂತರ ಹಾಡುತ್ತಿದ್ದಾರೆ. ಜುಲೈ 27 ರಂದು ಬಿಡುಗಡೆಯಾಗಲಿರುವ ಪಾರ್ಟ್‌ನರ್ ಚಿತ್ರದ ಮೊದಲ ಸಿಂಗಲ್ ಅಮೋರಾಗೆ ಕುನಾಲ್ ತಮ್ಮ ಧ್ವನಿಯನ್ನು ನೀಡಿದ್ದಾರೆ. ಕನ್ನಡದ ರೊಮ್ಯಾಂಟಿಕ್ ಹಾಡಿನಲ್ಲಿ ಗಾಯಕನ ವಿಶಿಷ್ಟ ಧ್ವನಿಯನ್ನು ಮತ್ತೊಮ್ಮೆ ಕೇಳಲು ಬಹಳ ದಿನಗಳಿಂದ ಕಾಯುತ್ತಿದ್ದ ಅಭಿಮಾನಿಗಳಲ್ಲಿ ಈ ಹಾಡು ಈಗಾಗಲೇ ಉತ್ಸಾಹವನ್ನು ಹುಟ್ಟುಹಾಕಿದೆ. ವರ್ಷಗಳಲ್ಲಿ, ಕುನಾಲ್ ಗಾಂಜಾವಾಲ ಹಲವಾರು ಸ್ಮರಣೀಯ ಕನ್ನಡ ಹಾಡುಗಳನ್ನು ಹಾಡಿದ್ದಾರೆ, ಅವುಗಳಲ್ಲಿ ಆಕಾಶ್, ಐಶ್ವರ್ಯ, ಅರಸು, ಮುಂಗಾರು ಮಳೆ, ಚಾರ್ಮಿನಾರ್, ಅರಮನೆ, ಮಿಲನ, ಶೌರ್ಯ ಮತ್ತು ಚೆಲುವಿನ ಚಿತ್ತಾರ ಮುಂತಾದ ಚಿತ್ರಗಳ ಹಿಟ್‌ಗಳು ಸೇರಿವೆ. ಅವರ ಭಾವಪೂರ್ಣ ಗಾಯನ ಮತ್ತು ಮಧುರವನ್ನು ಭಾವನೆಯೊಂದಿಗೆ ಬೆರೆಸುವ ಸಾಮರ್ಥ್ಯವು 2000 ರ ದಶಕದಲ್ಲಿ ಕನ್ನಡ ಚಿತ್ರರಂಗದಲ್ಲಿ ಅತ್ಯಂತ ಬೇಡಿಕೆಯ ಹಿನ್ನೆಲೆ



ಗಾಯಕರಲ್ಲಿ ಒಬ್ಬರನ್ನಾಗಿ ಮಾಡಿತು. ಅವರು ಅನೇಕ ಭಾರತೀಯ ಭಾಷೆಗಳಲ್ಲಿ ಹಾಡುವುದನ್ನು ಮುಂದುವರೆಸಿದರೂ, ಅವರ ಕನ್ನಡ ಪ್ರವಾಸಗಳು ಕ್ರಮೇಣ ಕಡಿಮೆಯಾಗುತ್ತಾ ಬಂದವು, ಈಗ ಅವರ ಮರಳುವಿಕೆಯನ್ನು ಹೆಚ್ಚು ವಿಶೇಷಗೊಳಿಸಿದೆ. ನಾಗಾರ್ಜುನ ಶರ್ಮಾ ಅವರ ಸಾಹಿತ್ಯದೊಂದಿಗೆ ನಕುಲ್ ಅಭ್ಯಂಕರ್ ಸಂಯೋಜಿಸಿರುವ ಈ ವರ್ಣರಂಜಿತ ಟ್ರ್ಯಾಕ್‌ನ್ನು ಪುದುಚೇರಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಚಿತ್ರೀಕರಿಸಲಾಗಿದೆ, ಮುರಳಿ ಮಾಸ್ಟರ್ ಅವರ ನೃತ್ಯ ಸಂಯೋಜನೆಯೊಂದಿಗೆ ಅಜಯ್ ರಾವ್ ಅವರನ್ನು ಸೊಗಸಾದ ಹೊಸ ಅವತಾರದಲ್ಲಿ ಕಾಣಿಸಿಕೊಳ್ಳುವ ನಿರೀಕ್ಷೆಯಿದೆ. ಈ ಯೋಜನೆಯು ಧೈರ್ಯಂ ನಂತರ ನಿರ್ದೇಶಕ ಶಿವ ತೇಜಸ್ ಮತ್ತು ಅಜಯ್ ರಾವ್ ನಡುವಿನ ಎರಡನೇ ಸಹಯೋಗವನ್ನು ಗುರುತಿಸುತ್ತದೆ. ಕಥೆ ಆಧುನಿಕ ಸಂಬಂಧಗಳು, ಪ್ರೀತಿ, ಬ್ರೇಕ್‌ಅಪ್‌ಗಳು ಮತ್ತು ಲಿವ್-ಇನ್ ಪಾಲುದಾರಿಕೆಗಳನ್ನು ಅನ್ವೇಷಿಸುತ್ತದೆ ಎಂದು ಚಲನಚಿತ್ರ ನಿರ್ಮಾಪಕರು ಹೇಳುತ್ತಾರೆ, ಆದರೆ ಅಂತಿಮವಾಗಿ ಜೀವನ ಸಂಗಾತಿಯನ್ನು ಆಯ್ಕೆಮಾಡುವಲ್ಲಿ ನಂಬಿಕೆ ಮತ್ತು ಬದ್ಧತೆಯ ಮಹತ್ವವನ್ನು ಎತ್ತಿ ತೋರಿಸುತ್ತದೆ. ಅಜಯ್ ರಾವ್ ಜೊತೆಗೆ ಬೃಂದಾ ಆಚಾರ್ಯ ನಟಿಸುತ್ತಿರುವ ಪಾರ್ಟ್ನರ್ ಚಿತ್ರೀಕರಣವನ್ನು ಪೂರ್ಣಗೊಳಿಸಿದ್ದು, ಪ್ರಸ್ತುತ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ.

## ನಾಳೆ ಕೆ.ಡಿ.ಪಿ. ಸಭೆ

**ಹಾಸನ:** ಬೇಲೂರು ವಿಧಾನಸಭಾ ಕ್ಷೇತ್ರದ ಶಾಸಕ ಹೆಚ್.ಕೆ.ಸುರೇಶ್ ಅವರ ಅಧ್ಯಕ್ಷತೆಯಲ್ಲಿ ಆ.1 ರಂದು ಬೆಳಿಗ್ಗೆ 10 ಗಂಟೆಗೆ ತಾಲ್ಲೂಕು ಪಂಚಾಯಿತಿ ಸಂಭಾಗಣದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆ.ಡಿ.ಪಿ) ಪ್ರಥಮ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಬೇಲೂರು ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.

## ಉದ್ಯೋಗಕ್ಕಾಗಿ ನೇರ ಸಂದರ್ಶನ

**ಹಾಸನ:** ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಮತ್ತು ಜಿಲ್ಲೆಯ ಐಕ್ಯೂ ಟ್ರೀ ರಿಸರ್ಚ್ ಪ್ರೈಲಿಟಿ (ಬ್ರೈನ್ ಎಕ್ಷ್ ಯೋಗ) ಸಹಭಾಗಿತ್ವದಲ್ಲಿ ಹಾಸನ ಜಿಲ್ಲೆಯ ಯುವಕ ಯುವತಿಯರಿಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ರೈಲ್ವೇ ಸ್ಟೇಷನ್ ಹತ್ತಿರ, ಸರ್ಕಾರಿ ಐ.ಟಿ.ಐ. ಕಾಲೇಜು ಆವರಣದಲ್ಲಿ ಆ.4 ರಂದು ಬೆಳಿಗ್ಗೆ 10.30 ಕ್ಕೆ ನೇರ ಸಂದರ್ಶನ ನಡೆಯಲಿದ್ದು, ಡಿ.ಎ.ಡ್, ಬಿ.ಎ.ಡ್ ಮತ್ತು ಯಾವುದೇ ಪದವಿ ಪಾಸಾದ ಪುರುಷ/ಮಹಿಳಾ ಅಭ್ಯರ್ಥಿಗಳು ನೇರ ಸಂದರ್ಶನದಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಳ್ಳುವಂತೆ ಉದ್ಯೋಗಾಧಿಕಾರಿ ತಿಳಿಸಿದ್ದಾರೆ.

# ಬೇಲೂರಿನಲ್ಲಿ ಶೇ.88.57 ಡಿಜಿಟಲೀಕರಣ ಪೂರ್ಣ

## ಮತದಾರರ ಪಟ್ಟಿ ಪರಿಷ್ಕರಣೆ ಚುರುಕು: ಆಗಸ್ಟ್ 8ರೊಳಗೆ ಶೇ.100 ಗುರಿ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕಿನಲ್ಲಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ಅತ್ಯಂತ ವೇಗವಾಗಿ ಸಾಗುತ್ತಿದ್ದು, ಎನ್ಯೂಮರೇಷನ್ ಫಾರ್ಮ್‌ಗಳ ಶೇ.100ರಷ್ಟು ವಿತರಣೆ ಪೂರ್ಣಗೊಂಡಿದೆ. ಭರ್ತಿ ಮಾಡಿದ ಅರ್ಜಿಗಳ ಪೈಕಿ ಈಗಾಗಲೇ ಶೇ.88.57ರಷ್ಟು ಡಿಜಿಟಲೀಕರಣ ಪೂರ್ಣಗೊಂಡಿದ್ದು, ಆ.8 ರೊಳಗೆ ಶೇ.100ರಷ್ಟು ಡಿಜಿಟಲೀಕರಣ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ ಎಂದು ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಅವರು ಹೇಳಿದರು.



ತಾಲೂಕು ಕಚೇರಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಸನ ಜಿಲ್ಲೆಯ ತಾಲ್ಲೂಕುಗಳ ಪೈಕಿ ಡಿಜಿಟಲೀಕರಣ ಪ್ರಗತಿಯಲ್ಲಿ ಅರಸೀಕೆರೆ ಮೊದಲ ಸ್ಥಾನದಲ್ಲಿದ್ದು, ಬೇಲೂರು 2ನೇ ಸ್ಥಾನದಲ್ಲಿದೆ. ಉಳಿದಿರುವ ಫಾರ್ಮ್‌ಗಳ ಡಿಜಿಟಲೀಕರಣವನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಅಧಿಕಾರಿಗಳು, ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಹಾಗೂ ಸಿಬ್ಬಂದಿ ಸಮನ್ವಯದಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ತಿಳಿಸಿದರು.

ಚುನಾವಣಾ ನೋಂದಣಿ ಅಧಿಕಾರಿ (ಇಆರ್‌ಒ) ರಜನಿಕಾಂತ್ ಮಾಹಿತಿ ನೀಡಿ, ಬೇಲೂರು ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 2,04,786 ಮತದಾರರಿದ್ದು, ಅವರಲ್ಲಿ 1,81,382 ಎನ್ಯೂಮರೇಷನ್ ಫಾರ್ಮ್‌ಗಳ ಡಿಜಿಟಲೀಕರಣ ಪೂರ್ಣಗೊಂಡಿದೆ. ಕ್ಷೇತ್ರದಲ್ಲಿ 270 ಮತಗಟ್ಟೆಗಳಿದ್ದು, ಚುನಾವಣಾ ಆಯೋಗದ ನಿರ್ದೇಶನದಂತೆ 300ಕ್ಕೂ ಹೆಚ್ಚು ಅಧಿಕಾರಿಗಳು ಹಾಗೂ ಬಿಎಲ್‌ಒಗಳು ಮನೆಮನೆಗೆ ಭೇಟಿ ನೀಡಿ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯದಲ್ಲಿ ತೊಡಗಿದ್ದಾರೆ ಎಂದು ಹೇಳಿದರು.

ಪರಿಶೀಲನೆ ವೇಳೆ 7,109 ಮತದಾರರು ಮೃತಪಟ್ಟಿರುವುದು, 6,327 ಮಂದಿ ಬೇರೆಡೆಗೆ ಸ್ಥಳಾಂತರಗೊಂಡಿರುವುದು (ಶಿಫ್ಟೆಡ್), 1,339 ದ್ವಿಪಾತ್ರ (ಡ್ಯುಪ್ಲಿಕೇಟ್) ನೋಂದಣಿಗಳು ಹಾಗೂ 446 ಮಂದಿ ವಿಳಾಸದಲ್ಲಿ ಲಭ್ಯವಾಗದಿರುವುದು ಪತ್ತೆಯಾಗಿದೆ. ಎಲ್ಲ ಹೋಬಳಿಗಳಲ್ಲಿ ಒಟ್ಟು 8,128 ಫಾರ್ಮ್‌ಗಳ ಡಿಜಿಟಲೀಕರಣ ಮಾತ್ರ ಬಾಕಿ ಉಳಿದಿದ್ದು, ನಿಯಮಾನುಸಾರ ಈ ಮಾಹಿತಿಗಳನ್ನು ಮತದಾರರ ಪಟ್ಟಿಯಲ್ಲಿ ಪರಿಷ್ಕರಿಸಲಾಗುತ್ತಿದೆ ಎಂದು ವಿವರಿಸಿದರು.

ಯಾವುದೇ ಬಿಎಲ್‌ಒ ಮನೆಗಳಿಗೆ ಭೇಟಿ ನೀಡಿ ಫಾರ್ಮ್ ವಿತರಿಸದಿದ್ದರೆ ಅಥವಾ ಫಾರ್ಮ್ ಭರ್ತಿ ಮಾಡುವಲ್ಲಿ ತೊಂದರೆ ಎದುರಾದರೆ ಸಾರ್ವಜನಿಕರು ಸಹಾಯಕ ಚುನಾವಣಾ ನೋಂದಣಿ ಅಧಿಕಾರಿ (ಎಇಆರ್‌ಒ) ಅಥವಾ ಚುನಾವಣಾ ನೋಂದಣಿ ಅಧಿಕಾರಿ (ಇಆರ್‌ಒ) ಅವರನ್ನು ನೇರವಾಗಿ ಸಂಪರ್ಕಿಸಬಹುದು. ದೂರು ಬಂದ ತಕ್ಷಣ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಪರಿಹರಿಸಲಿದ್ದಾರೆ ಎಂದು ಭರವಸೆ ನೀಡಿದರು.

ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯದಲ್ಲಿ ಯಾವುದೇ ಲೋಪವಾಗದಂತೆ ಎಲ್ಲಾ ಬಿಎಲ್‌ಒಗಳಿಗೆ ಜಿಲ್ಲಾ ಮಟ್ಟದಲ್ಲಿ ಸಮಗ್ರ ತರಬೇತಿ ನೀಡಲಾಗಿದೆ. ಜಿಲ್ಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಮಾಸ್ಟರ್ ಟ್ರೈನರ್‌ಗಳ ಮೂಲಕ ಹಾಗೂ ಮೊಬೈಲ್ ಆ್ಯಪ್ ಬಳಕೆಯ ಕುರಿತು ವಿಶೇಷ ತರಬೇತಿ ನೀಡಿರುವುದರಿಂದ ಕಾರ್ಯ ಸುಗಮವಾಗಿ ನಡೆಯುತ್ತಿದೆ ಎಂದು ಹೇಳಿದರು.

ಚುನಾವಣಾ ಆಯೋಗದ ನಿರ್ದೇಶನದಂತೆ ನಡೆಯುತ್ತಿರುವ ಈ ವಿಶೇಷ ಪರಿಷ್ಕರಣೆ ಕಾರ್ಯದಲ್ಲಿ ಪ್ರತಿಯೊಬ್ಬ ಮತದಾರರೂ ತಮ್ಮ ಹೆಸರು, ವಿಳಾಸ ಹಾಗೂ ಇತರೆ ವಿವರಗಳನ್ನು ಪರಿಶೀಲಿಸಿ, ನಿಖರ ಮಾಹಿತಿಯನ್ನು ನೀಡಿ ಬಿಎಲ್‌ಒಗಳೊಂದಿಗೆ ಸಹಕರಿಸಬೇಕು. ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಆಗಸ್ಟ್ 19ರಂದು ಕರಡು ಮತದಾರರ ಪಟ್ಟಿಯನ್ನು ರಾಷ್ಟ್ರೀಯ ಹಾಗೂ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ವಿತರಿಸಲಾಗುವುದು ಎಂದು ತಿಳಿಸಿದರು.

ಬಿ.ಎಸ್.ಪಿ. ರಾಜು, ಕಾಂಗ್ರೆಸ್ ಪಕ್ಷದ ಬಿಎಲ್‌ಒ ಜಮಾಲ್, ಬಿಜೆಪಿ ಪಕ್ಷದ ಬಿಎಲ್‌ಒ ರಂಗನಾಥ್, ಪುರಸಭಾ ಮುಖ್ಯಾಧಿಕಾರಿ ಬಸವರಾಜ ಟಾಕಪ್ಪ ಸಿಗ್ಗಾವಿ ಹಾಗೂ ಆರ್‌ಒಗಳಾದ ಗೋಪಿ, ಲಕ್ಷ್ಮಣ್ ಕಾಂತರಾಜ್ ಉಪಸ್ಥಿತರಿದ್ದರು.

## ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ ಭಾರತ ಐತಿಹಾಸಿಕ ಸಾಧನೆ

# ದಿಲೀಪ್‌ಗೆ ಚಿನ್ನ, ಬಸಿಲ್‌ಗೆ ಬೆಳ್ಳಿ

• ಪ್ರಜೋದಯ ವರದಿ




**ಗ್ಲಾಸ್ಗೋ:** ಕಾಮನ್‌ವೆಲ್ತ್ ಗೇಮ್ಸ್‌ನ ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ ಭಾರತವು ಐತಿಹಾಸಿಕ ಸಾಧನೆ ಮಾಡಿದೆ. ಪುರುಷರ ಟಿ 47 ವಿಭಾಗದ 100 ಮೀಟರ್ ಓಟದ ಸ್ಪರ್ಧೆಯಲ್ಲಿ ಮೊದಲೆರಡು ಸ್ಥಾನಗಳನ್ನು ತನ್ನದಾಗಿಸಿಕೊಂಡಿದೆ.

ದಿಲೀಪ್ ಮಹದೂ ಗಾವಿತ್ ಚಿನ್ನ ಗೆದ್ದರೆ, ಮೊಹಮ್ಮದ್ ಬಸಿಲ್ ಬೆಳ್ಳಿ ಪದಕಕ್ಕೆ ಕೊರಳೊಡ್ಡಿದ್ದಾರೆ. ದಿಲೀಪ್ ಅವರು 10.71 ಸೆಕೆಂಡುಗಳಲ್ಲಿ ಗುರಿ ತಲುಪಿ ಅಗ್ರಸ್ಥಾನ ಪಡೆದ್ದರೆ, ಮೊಹಮ್ಮದ್ ಬಸಿಲ್ ಅವರು 10.83 ಸೆಕೆಂಡುಗಳಲ್ಲಿ ಗುರಿ ತಲುಪುವಲ್ಲಿ ಯಶಸ್ವಿಯಾಗಿದ್ದಾರೆ.

ಇತ್ತ, ಇಂಗ್ಲೆಂಡ್‌ನ ಕೆವಿನ್ ಸ್ಯಾಂಟೋಸ್ 10.85 ಸೆಕೆಂಡುಗಳಲ್ಲಿ ಗುರಿ ತಲುಪಿ ಕಂಚಿನ ಪದಕ ತಮ್ಮದಾಗಿಸಿಕೊಂಡಿದ್ದಾರೆ.

**ಶ್ರೀಶಂಕರ್‌ಗೆ ಸತತ ಎರಡನೇ ಬೆಳ್ಳಿ;** ಕಾಮನ್‌ವೆಲ್ತ್ ಗೇಮ್ಸ್‌ನ ಲಾಂಗ್ ಜಂಪ್ ಸ್ಪರ್ಧೆಯಲ್ಲಿ 28 ವರ್ಷದ ಮುರಳಿ ಶ್ರೀಶಂಕರ್ ಅವರು 8.09 ಮೀಟರ್ ದೂರ ಜಿಗಿಯುವ ಮೂಲಕ ಸತತ ಎರಡನೇ ಬಾರಿಗೆ ಬೆಳ್ಳಿ ಪದಕಕ್ಕೆ ಮುತ್ತಿಕ್ಕಿದ್ದಾರೆ.

**ಶ್ರೀಶಂಕರ್‌ಗೆ ಸತತ 2 ಬೆಳ್ಳಿ**

ಕಾಮನ್‌ವೆಲ್ತ್ ಗೇಮ್ಸ್‌ನ ಲಾಂಗ್ ಜಂಪ್ ಸ್ಪರ್ಧೆಯಲ್ಲಿ ಸತತ ಎರಡು ಪದಕ ಗೆದ್ದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಶ್ರೀಶಂಕರ್ ಪಾತ್ರರಾಗಿದ್ದಾರೆ.

2022ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿಯೂ ಬೆಳ್ಳಿ ಗೆದ್ದಿದ್ದರು. ಈಗ ಮತ್ತೊಮ್ಮೆ ಅದ್ಭುತ ಪ್ರದರ್ಶನ ನೀಡಿದ್ದಾರೆ.

ಭಾರತವು ಪ್ರಸ್ತುತ ಗೇಮ್ಸ್‌ನಲ್ಲಿ 3 ಚಿನ್ನ, 9 ಬೆಳ್ಳಿ ಮತ್ತು 3 ಕಂಚು ಸೇರಿ ಒಟ್ಟು 15 ಪದಕಗಳನ್ನು ಗೆದ್ದಿದ್ದು, ಪದಕ ಪಟ್ಟಿಯಲ್ಲಿ 8ನೇ ಸ್ಥಾನದಲ್ಲಿದೆ.

ಬಾಕ್ಸಿಂಗ್ ವಿಭಾಗದಲ್ಲಿ ಭಾರತಕ್ಕೆ ಹತ್ತು ಪದಕಗಳು ಲಭಿಸುವುದು ಖಚಿತವಾಗಿದೆ.

# ಅಪೂರ್ಣವಾಗಿದ್ದ ಬಸ್ ತಂಗುದಾಣಕ್ಕೆ ಟಾರ್ಪಲ್ ಅಳವಡಿಕೆ

• ಪ್ರಜೋದಯ ವರದಿ

**ಸಕಲೇಶಪುರ:** ತಾಂತ್ರಿಕ ಕಾರಣದಿಂದ ಕಾಮಗಾರಿ ಸ್ಥಗಿತಗೊಂಡು ಅಪೂರ್ಣವಾಗಿದ್ದ ಹಳೇ ಬಸ್ ನಿಲ್ದಾಣದ ಸಮೀಪದ ಬಸ್ ತಂಗುದಾಣಕ್ಕೆ ನಾಗರಿಕರು ಹಾಗೂ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಸ್ವಂತ ವೆಚ್ಚದಲ್ಲಿ ಟಾರ್ಪಲ್ ಅಳವಡಿಸಿ, ಮಳೆ ಮತ್ತು ಬಿಸಿಲಿನಿಂದ ಬಸ್ ಪ್ರಯಾಣಿಕರಿಗೆ ತಾತ್ಕಾಲಿಕ ಆಶ್ರಯ ಕಲ್ಪಿಸಿದರು.



ಹಳೇ ಬಸ್ ನಿಲ್ದಾಣದಲ್ಲಿ ಪ್ರತಿನಿತ್ಯ ಸಾವಿರಾರು ಪ್ರಯಾಣಿಕರು ಬಸ್‌ಗಾಗಿ ಕಾಯುತ್ತಿದ್ದು, ಸೂಕ್ತ ತಂಗುದಾಣ ಇಲ್ಲದ ಕಾರಣ ಮಳೆ ಹಾಗೂ ಬಿಸಿಲಿನಲ್ಲಿ ಸಂಕಷ್ಟ ಅನುಭವಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಶಾಸಕ ಸಿಮೆಂಟ್ ಮಂಜು ಅವರು ತಮ್ಮ ವಿವೇಚನಾ ನಿಧಿಯಿಂದ 20 ಲಕ್ಷ ರೂ. ವೆಚ್ಚದಲ್ಲಿ ಉಪನೊಂದಣಾಧಿಕಾರಿ ಕಚೇರಿಗೆ ಸೇರಿದ ಜಾಗದಲ್ಲಿ ಬಸ್ ತಂಗುದಾಣ, ಪುರಸಭೆ ಎದುರು ಆಟೋ ತಂಗುದಾಣ ಹಾಗೂ ಹೂವಿನ ಮಾರುಕಟ್ಟೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದ್ದರು. ಕಾಮಗಾರಿ ಅಂತಿಮ ಹಂತದಲ್ಲಿದ್ದ ವೇಳೆ ಕೆಲವರು ಜಿಲ್ಲಾಧಿಕಾರಿಗೆ ದೂರು ನೀಡಿದ್ದ ಹಿನ್ನೆಲೆಯಲ್ಲಿ ತಾಂತ್ರಿಕ ಕಾರಣಗಳಿಂದ ಕಾಮಗಾರಿ ಸ್ಥಗಿತಗೊಂಡಿತು.

ಕಾಮಗಾರಿ ಶೀಘ್ರ ಪೂರ್ಣಗೊಳಿಸುವಂತೆ ಸಾರ್ವಜನಿಕರು ಹಲವು ಬಾರಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಿದ್ದರು. ಇತ್ತೀಚೆಗೆ ಜಿಲ್ಲಾಧಿಕಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಶೀಘ್ರ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರೂ ಕಾಮಗಾರಿ ಮರು ಪ್ರಾರಂಭವಾಗದ ಕಾರಣ ಸಾರ್ವಜನಿಕರು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಸ್ವಯಂಪ್ರೇರಿತವಾಗಿ ಮುಂದಾಗಿ ಬಸ್ ತಂಗುದಾಣಕ್ಕೆ ಟಾರ್ಪಲ್ ಅಳವಡಿಸುವ ಮೂಲಕ ಪ್ರಯಾಣಿಕರಿಗೆ ತಾತ್ಕಾಲಿಕ ನೆರವು ಒದಗಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಘಟನೆಗಳ ಪದಾಧಿಕಾರಿಗಳು, ಶಾಲಾ ಮಕ್ಕಳು, ಮಹಿಳೆಯರು, ವೃದ್ಧರು ಸೇರಿದಂತೆ ನೂರಾರು ಪ್ರಯಾಣಿಕರು ಪ್ರತಿದಿನ ಮಳೆ, ಗಾಳಿ ಹಾಗೂ ಬಿಸಿಲಿನಲ್ಲಿ ಬಸ್‌ಗಾಗಿ ಕಾಯಬೇಕಾದ ಅನಿವಾರ್ಯತೆ ಎದುರಿಸುತ್ತಿದ್ದಾರೆ. ಸಾರ್ವಜನಿಕರ ಸಂಕಷ್ಟ ನಿವಾರಿಸಲು ಈ ತಾತ್ಕಾಲಿಕ ವ್ಯವಸ್ಥೆ ಮಾಡಲಾಗಿದೆ ಎಂದರು.

ಟಾರ್ಪಲ್ ವ್ಯವಸ್ಥೆಯನ್ನು ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಕಾಂತರಾಜ್ ಹೊನ್ನೆಕೋಡಿ ಹಾಗೂ ರೈಲ್ವೆ ಹೋರಾಟ ರಕ್ಷಣಾ ಸಮಿತಿಯ ನಾರಾಯಣ ಆಳ್ವ ಮಾಡಿಕೊಟ್ಟರೆ, ಟಾರ್ಪಲ್ ಅಳವಡಿಸುವ ವ್ಯವಸ್ಥೆಯನ್ನು ಶ್ರೀರಾಮಸೇನೆ ಮುಖಂಡ ಉಮೇಶ್ ನೆರವೇರಿಸಿದರು.

ಈ ಸಂದರ್ಭದಲ್ಲಿ ಬಾಗೆ ನೀಲಕಂಠ, ಕಿರೇಹಳ್ಳಿ ಶಿವಕುಮಾರ್, ನಾರಾಯಣ ಆಳ್ವ, ಉಮೇಶ್, ಹೆತ್ತೂರು ದೇವರಾಜ್, ಧರ್ಮ, ಪತ್ರಕರ್ತ ಮಲ್ನಾಡ್ ಮೆಹಬೂಬ್, ಅಪರ್ ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಲೋಕಸಭೆಯಲ್ಲಿ 'ವಂದೇ ಮಾತರಂ' ಮಸೂದೆ ಅಂಗೀಕಾರ

## ಯಾವುದೇ ಅಡ್ಡಿ ಅಥವಾ ಅವಮಾನ ಮಾಡಿದರೆ 3 ವರ್ಷಗಳವರೆಗೆ ಜೈಲು ಶಿಕ್ಷೆ

• ಪ್ರಜೋದಯ ವರದಿ

**ನವದೆಹಲಿ:** ರಾಷ್ಟ್ರೀಯ ಗೀತೆ ವಂದೇ ಮಾತರಂಗೆ ಯಾವುದೇ ಅಡ್ಡಿ ಅಥವಾ ಅವಮಾನ ಮಾಡಿದರೆ 3 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಬಹುದಾದ ಕ್ರಿಮಿನಲ್ ಅಪರಾಧವೆಂದು ಪರಿಗಣಿಸುವ ಮಸೂದೆ ರಾಜ್ಯಸಭೆ ಬಳಿಕ ಲೋಕಸಭೆಯಲ್ಲೂ ಅಂಗೀಕಾರಗೊಂಡಿದೆ. ರಾಷ್ಟ್ರೀಯ ಗೌರವಕ್ಕೆ ಅವಮಾನಗಳ ತಡೆಗಟ್ಟುವಿಕೆ (ತಿದ್ದುಪಡಿ) ಮಸೂದೆ, 2026 ಅನ್ನು ಲೋಕಸಭೆಯಲ್ಲಿ ಸಂಕ್ಷಿಪ್ತ ಚರ್ಚೆಯ ನಂತರ ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.



ಮಸೂದೆಯ ಮೇಲಿನ ಚರ್ಚೆಗೆ ಪ್ರತಿಕ್ರಿಯಿಸಿದ ಗೃಹ ವ್ಯವಹಾರಗಳ ರಾಜ್ಯ ಸಚಿವ ನಿತ್ಯಾನಂದ ರೈ, ದೇಶದ ಜನರ ಭಾವನೆಗಳನ್ನು ಗಮನದಲ್ಲಿಟ್ಟುಕೊಂಡು ಮಸೂದೆಯನ್ನು ಪರಿಚಯಿಸಲಾಗಿದೆ. ವಂದೇ ಮಾತರಂ ದೇಶದ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ದೇಶವಾಸಿಗಳ ಪ್ರೀತಿಯ ಘೋಷಣೆಯಾಗಿತ್ತು ಎಂದು ಹೇಳಿದರು. ತನ್ನ ತುಷ್ಟೀಕರಣ ನೀತಿಯಿಂದಾಗಿ, ಕಾಂಗ್ರೆಸ್ ಪಕ್ಷವು ಸ್ವಾತಂತ್ರ್ಯದ ನಂತರ ವಂದೇ ಮಾತರಂಗೆ ಅರ್ಹವಾದ ಗೌರವ ಸಿಗುವ ಅವಕಾಶ ನೀಡಲಿಲ್ಲ ಎಂದು ಅವರು ಆರೋಪಿಸಿದರು. ಈ ಕಾರಣಕ್ಕಾಗಿ ಸರ್ಕಾರವು ವಂದೇ ಮಾತರಂನ ಕೇವಲ ಎರಡು ಚರಣಗಳನ್ನು ಮಾತ್ರ ಸ್ವೀಕರಿಸಿತು. ಸರ್ಕಾರಿ ಕಾರ್ಯಕ್ರಮಗಳು ಮತ್ತು ಕಾರ್ಯಕ್ರಮಗಳಲ್ಲಿ ಈ ಎರಡು ಚರಣಗಳನ್ನು ಮಾತ್ರ ಹಾಡಲಾಯಿತು ಮತ್ತು ನುಡಿಸಲಾಯಿತು ಎಂದು ಅವರು ಹೇಳಿದರು.

ಸ್ವಾತಂತ್ರ್ಯದ ನಂತರದ ಮೊದಲ ದಿನದಂದು, ಪಂಡಿತ್ ಓಂಕಾರ್‌ನಾಥ್ ಠಾಕೂರ್ ಅವರು ಮೊದಲ ಗೃಹ ಸಚಿವ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ನಿರ್ದೇಶನದ ಮೇರೆಗೆ ಆಲ್ ಇಂಡಿಯಾ ರೇಡಿಯೋದಲ್ಲಿ ಸಂಪೂರ್ಣ ವಂದೇ ಮಾತರಂ ಅನ್ನು ಹಾಡಿದರು. ಮಸೂದೆಯು 1971ರ ರಾಷ್ಟ್ರೀಯ ಗೌರವಕ್ಕೆ ಅವಮಾನಗಳ ತಡೆ ಕಾಯಿದೆಯ ಸೆಕ್ಷನ್ 3 ಅನ್ನು ತಿದ್ದುಪಡಿ ಮಾಡಲು ಪ್ರಯತ್ನಿಸುತ್ತದೆ. ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ, ಉದ್ದೇಶಪೂರ್ವಕವಾಗಿ ರಾಷ್ಟ್ರಗೀತೆ ಹಾಡುವುದನ್ನು ತಡೆಯುವುದು ಅಥವಾ ಅದರ ಹಾಡುಗಾರಿಕೆಯಲ್ಲಿ ತೊಡಗಿರುವ ಯಾವುದೇ ಸಭೆಗೆ ಅಡ್ಡಿಪಡಿಸುವುದು ಮೂರು ವರ್ಷಗಳವರೆಗೆ ಜೈಲು ಶಿಕ್ಷೆ, ದಂಡ ಅಥವಾ ಎರಡನ್ನೂ ನೀಡಬಹುದಾಗಿದೆ.

ತಿದ್ದುಪಡಿಯು ಜನಗಣಮನದಂತೆ ವಂದೇ ಮಾತರಂಗೆ ಒಂದೇ ರೀತಿಯ ರಕ್ಷಣೆಯನ್ನು ವಿಸ್ತರಿಸುತ್ತದೆ. ಯಾರಾದರೂ ಉದ್ದೇಶಪೂರ್ವಕವಾಗಿ ಅವಮಾನಿಸುವುದು ತಡೆಯುವುದು ಅಥವಾ ರಾಷ್ಟ್ರೀಯ ಗೀತೆಯನ್ನು ಹಾಡುವ ಸಭೆಯನ್ನು ಅಡ್ಡಿಪಡಿಸುವುದು ಕಂಡುಬಂದರೆ ಅದೇ ದಂಡವನ್ನು ಎದುರಿಸಬೇಕಾಗುತ್ತದೆ.

## ಎನ್ಯೂಮರೇಷನ್ ಫಾರ್ಮ್ ಶೀಘ್ರವೇ ತಲುಪಿಸಲು ಮನವಿ

• ಪ್ರಜೋದಯ ವರದಿ

**ಅರಕಲಗೂಡು:** ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್- 2026) ಕಾರ್ಯಕ್ರಮ ಅರಕಲಗೂಡು ವಿಧಾನಸಭಾ ಕ್ಷೇತ್ರದಲ್ಲಿ ನಡೆಯುತ್ತಿದ್ದು, ಕ್ಷೇತ್ರದ ಎಲ್ಲ ಮತದಾರರು ಈಗಾಗಲೇ ಪಡೆದುಕೊಂಡಿರುವ ಎನ್ಯೂಮರೇಷನ್ ಫಾರ್ಮ್‌ಗಳನ್ನು ಕೊನೆಯ ದಿನದವರೆಗೆ ಕಾಯದೆ ಆದಷ್ಟು ಬೇಗ ತಮ್ಮ ವ್ಯಾಪ್ತಿಯ ಬಿಎಲ್‌ಒ ಅಥವಾ ಬಿಎಲ್‌ಒ ಅವರಿಗೆ ಸಲ್ಲಿಸುವಂತೆ ತಹಸೀಲ್ದಾರ್ ಕೆ.ಸಿ. ಸೌಮ್ಯ ಮನವಿ ಮಾಡಿದರು.



ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 2,36,667 ಮತದಾರರಿದ್ದು, ಈ ಪೈಕಿ ಈಗಾಗಲೇ 2,09,195 ಮತದಾರರು ತಮ್ಮ ಎನ್ಯೂಮರೇಷನ್ ಫಾರ್ಮ್‌ಗಳನ್ನು ಮಾಹಿತಿಯೊಂದಿಗೆ ಸಲ್ಲಿಸಿದ್ದಾರೆ. ಇನ್ನೂ 7,384 ಫಾರ್ಮ್‌ಗಳು ಮತದಾರರ ಬಳಿಯೇ ಬಾಕಿ ಉಳಿದಿದ್ದು, ಅವುಗಳನ್ನು ಶೀಘ್ರವಾಗಿ ಸಲ್ಲಿಸುವಂತೆ ತಿಳಿಸಿದರು.

ಮತದಾರರ ಹೆಸರು ಮತದಾರರ ಪಟ್ಟಿಯಲ್ಲಿ ಮುಂದುವರಿಯುವುದು ಅತ್ಯಂತ ಮುಖ್ಯವಾಗಿದೆ. ಸರ್ಕಾರದ ವಿವಿಧ ಯೋಜನೆಗಳು ಹಾಗೂ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಮತದಾರರ ಪಟ್ಟಿಯಲ್ಲಿ ಹೆಸರು ಇರುವುದು ಅಗತ್ಯವಾಗಿರುವುದರಿಂದ ಪ್ರತಿಯೊಬ್ಬರೂ ತಮ್ಮ ಎನ್ಯೂಮರೇಷನ್ ಫಾರ್ಮ್‌ಗಳನ್ನು ವಿಳಂಬ ಮಾಡದೆ ಸಲ್ಲಿಸಿ ಎಸ್‌ಐಆರ್- 2026 ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯಕ್ಕೆ ಸಹಕರಿಸಬೇಕು ಎಂದು ತಹಸೀಲ್ದಾರ್ ಕೆ.ಸಿ.ಸೌಮ್ಯ ಅವರು ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿದರು.

# ಒತ್ತಡದ ಜೀವನವೇ ಹಲವು ರೋಗಗಳಿಗೆ ಕಾರಣ

## ಶಾಸಕ ಸಿಮೆಂಟ್ ಮಂಜು ಅಭಿಮತ

• ಪ್ರಜೋದಯ ವರದಿ

**ಸಕಲೇಶಪುರ:** ಒತ್ತಡದ ಜೀವನ ಶೈಲಿಯೇ ಇಂದು ಹಲವಾರು ರೋಗಗಳಿಗೆ ಪ್ರಮುಖ ಕಾರಣವಾಗಿದ್ದು, ಸಾಧ್ಯವಾದಷ್ಟು ಒತ್ತಡರಹಿತ ಜೀವನ ನಡೆಸುವ ಜೊತೆಗೆ ನಿಯಮಿತ ವ್ಯಾಯಾಮ, ಯೋಗ ಹಾಗೂ ಸಮತೋಲಿತ ಆಹಾರ ಪದ್ಧತಿಯನ್ನು ರೂಢಿಸಿಕೊಳ್ಳಬೇಕು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.



ಪಟ್ಟಣದ ಶ್ರೀನಿವಾಸ ಕಲ್ಯಾಣ ಮಂಟಪದಲ್ಲಿ ಗುರುವಾರ ಮಾನವ ಹಕ್ಕುಗಳ ರಕ್ಷಣಾ ಸಮಿತಿ ಹಾಗೂ ಹಾಸನದ ಪುಣ್ಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಸಹಯೋಗದಲ್ಲಿ ಆಯೋಜಿಸಿದ್ದ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಇಂದು ಅನೇಕರು ಒತ್ತಡದ ಬದುಕಿನಿಂದ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಆರೋಗ್ಯವೇ ಮನುಷ್ಯನ ಅಮೂಲ್ಯ ಸಂಪತ್ತಾಗಿದ್ದು, ಆರೋಗ್ಯ ಕಾಪಾಡಿಕೊಳ್ಳಲು ನಿಯಮಿತ ಆಹಾರ ಪದ್ಧತಿ, ವ್ಯಾಯಾಮ, ಯೋಗ ಮತ್ತು ಪ್ರಾಣಾಯಾಮವನ್ನು ಜೀವನದ ಭಾಗವಾಗಿಸಿಕೊಳ್ಳಬೇಕು. ಉತ್ತಮ ಆರೋಗ್ಯವಿದ್ದಾಗ ಮಾತ್ರ ಉತ್ತಮ ಜೀವನ ನಡೆಸಲು ಸಾಧ್ಯ ಎಂದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಹಾಗೂ ಕಾಂಗ್ರೆಸ್ ಮುಖಂಡ ಮುರಳಿ ಮೋಹನ್ ಮಾತನಾಡಿ, ಆರೋಗ್ಯ ಸಮಸ್ಯೆಗಳ ಚಿಕಿತ್ಸೆಗೆ ಇಂದು ಜನರು ಅಪಾರ ಹಣ ವೆಚ್ಚ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಆರ್ಥಿಕವಾಗಿ ಹಿಂದುಳಿದವರಿಗೆ ಚಿಕಿತ್ಸೆ ದುಬಾರಿಯಾಗಿದ್ದು, ಇಂತಹ ಸಂದರ್ಭದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರಗಳು ಸಾರ್ವಜನಿಕರಿಗೆ ಹೆಚ್ಚಿನ ನೆರವಾಗುತ್ತಿವೆ. ಸಮಾಜಮುಖಿ ಸೇವೆಯಾಗಿ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವ ಮಾನವ ಹಕ್ಕುಗಳ ರಕ್ಷಣಾ ಸಮಿತಿಯ ಕಾರ್ಯ ಶ್ಲಾಘನೀಯ ಎಂದು ಹೇಳಿದರು.

ಮಾನವ ಹಕ್ಕುಗಳ ರಕ್ಷಣಾ ಸಮಿತಿಯ ರಾಜ್ಯಾಧ್ಯಕ್ಷ ಲಕ್ಷ್ಮೀನಾರಾಯಣ ಮಾತನಾಡಿ, ಸಮಿತಿಯು ಹಲವು ವರ್ಷಗಳಿಂದ ಮಾನವ ಹಕ್ಕುಗಳ ರಕ್ಷಣೆ ಹಾಗೂ ಸಮಾಜಮುಖಿ ಸೇವಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿದೆ. ಸಾರ್ವಜನಿಕರ ಸಹಕಾರದಿಂದ ಮುಂದಿನ ದಿನಗಳಲ್ಲಿ ಇನ್ನಷ್ಟು ಜನಪರ ಹಾಗೂ ಸೇವಾಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು.

ಜಿಲ್ಲಾಧ್ಯಕ್ಷ ಜೀವನ್‌ಗೌಡ ಮಾತನಾಡಿ, ಆರೋಗ್ಯವೇ ಸಂಪತ್ತು ಎಂಬ ಧ್ಯೇಯದೊಂದಿಗೆ ಶಿಬಿರವನ್ನು ಆಯೋಜಿಸಲಾಗಿದ್ದು, ವಿವಿಧ ತಜ್ಞ ವೈದ್ಯರಿಂದ ಆರೋಗ್ಯ ತಪಾಸಣೆ, ಉಚಿತ ಔಷಧಿ ವಿತರಣೆ ಹಾಗೂ ಅಗತ್ಯವಿರುವವರಿಗೆ ಹಾಸನದ ಪುಣ್ಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಶೇ.60 ರಿಯಾಯಿತಿ ದರದಲ್ಲಿ ಚಿಕಿತ್ಸೆ ಪಡೆಯುವ ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದರು.

ಶಿಬಿರದಲ್ಲಿ ಸಾವಿರಾರು ಸಾರ್ವಜನಿಕರು ಭಾಗವಹಿಸಿ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಉಚಿತ ವೈದ್ಯಕೀಯ ಸೇವೆಯ ಪ್ರಯೋಜನ ಪಡೆದುಕೊಂಡರು.

ಮಾನವ ಹಕ್ಕುಗಳ ರಕ್ಷಣಾ ಸಮಿತಿಯ ತಾಲ್ಲೂಕು ಅಧ್ಯಕ್ಷ ವಿಜಯಕುಮಾರ್, ಕಾರ್ಯದರ್ಶಿಗಳಾದ ಪ್ರದೀಪ್ ಹಾಗೂ ಕಿಟ್ಟಿ, ಜಿ.ಪಂ. ಮಾಜಿ ಸದಸ್ಯ ಪಲ್ಲವಿ ಶ್ರೀನಿವಾಸ್, ಲಯನ್ಸ್ ಸಂಸ್ಥೆಯ ಅಧ್ಯಕ್ಷ ವಿಶ್ವನಾಥ್, ವ್ಯವಸ್ಥಾಪಕ ರಘು ಉಪಸ್ಥಿತರಿದ್ದರು.

## ಜಾವೆಲಿನ್ ಥ್ರೋನಲ್ಲಿ ಫೈನಲ್‌ಗೆ ಭಾರತದ ಅಥ್ಲೀಟ್ ನೀರಜ್ ಚೋಪ್ರಾ




• ಪ್ರಜೋದಯ ವರದಿ

ಗ್ಲಾಸ್ಗೋ: ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪುರುಷರ ಜಾವೆಲಿನ್ ಥ್ರೋ ಸ್ಪರ್ಧೆಯ ಫೈನಲ್‌ಗೆ ಭಾರತದ ತಾರಾ ಅಥ್ಲೀಟ್ ನೀರಜ್ ಚೋಪ್ರಾ ಪ್ರವೇಶಿಸಿದ್ದಾರೆ.

ಅರ್ಹತಾ ಸುತ್ತಿನಲ್ಲಿ ನೀರಜ್ 79.61 ಮೀಟರ್ ದೂರ ಜಾವೆಲಿನ್ ಎಸೆದು ಫೈನಲ್‌ಗೆ ಅರ್ಹತೆ ಗಿಟ್ಟಿಸಿಕೊಂಡಿದ್ದಾರೆ. ಭಾರತದ ರೋಹಿತ್ ಯಾದವ್ ಮತ್ತು ಯಶ್‌ವೀರ್ ಸಿಂಗ್ ಕೂಡ ಅಂತಿಮ ಸುತ್ತಿಗೆ ಪ್ರವೇಶ ಪಡೆದಿದ್ದಾರೆ

ಅರ್ಹತಾ ಸುತ್ತಿನಲ್ಲಿ ಒಟ್ಟು 20 ಅಥ್ಲೀಟ್‌ಗಳು ಸ್ಪರ್ಧಿಸಿದ್ದು, ಅಗ್ರ 12 ಮಂದಿ ಫೈನಲ್‌ಗೆ ಆಯ್ಕೆಯಾದರು. ನೇರ ಅರ್ಹತೆಗಾಗಿ 83 ಮೀಟರ್ ಗುರಿ ನಿಗದಿಪಡಿಸಲಾಗಿತ್ತು. ನೀರಜ್ ಅರ್ಹತಾ ಸುತ್ತಿನಲ್ಲಿ ಐದನೇ ಸ್ಥಾನ ಪಡೆದರು.

2018ರ ಗೋಲ್ಡ್ ಕೋಸ್ಟ್ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ 86.47 ಮೀಟರ್ ಎಸೆದು ಚಿನ್ನದ ಪದಕ ಗೆದ್ದಿದ್ದ ನೀರಜ್ ಅವರು ಗಾಯದ ಕಾರಣದಿಂದ 2022ರ ಬರ್ಮಿಂಗ್‌ಹ್ಯಾಮ್ ಕ್ರೀಡಾಕೂಟದಲ್ಲಿ ಸ್ಪರ್ಧಿಸಿರಲಿಲ್ಲ.

## ವರುಣ ದೇವನ ಕಣ್ಣಾಮುಚ್ಚಾಲೆಯಿಂದಾಗಿ ಉಳುಮೆ ಕಾಣದ ಕೃಷಿ ಜಮೀನು | ಬೆಳೆದು ನಿಂತ ಕಳೆ!

# ಮಳೆ ಕೊರತೆಯಿಂದ ಸಂಕಷ್ಟಕ್ಕೆ ಸಿಲುಕಿದ ಅನ್ನದಾತ

• ಆರ್. ಶ್ರೀನಿವಾಸ್ ಉಳ್ಳಾವಳ್ಳಿ

**ಚನ್ನರಾಯಪಟ್ಟಣ:** ಪೂರ್ವ ಮುಂಗಾರಿನಿಂದಲೂ ವಾಡಿಕೆಯಂತೆ ಮಳೆಯಾಗದ ಕಾರಣ ರೈತರ ಬದುಕು ಸಂಕಷ್ಟಕ್ಕೆ ಸಿಲುಕಿದೆ. ತಾಲ್ಲೂಕು ಸುಮಾರು 22 ಸಾವಿರ ಹೆಕ್ಟೇರ್ ಕೃಷಿ ಪ್ರದೇಶ ಹೊಂದಿದ್ದು ಮಳೆಯ ಕೊರತೆ ಪರಿಣಾಮ ಈ ವರ್ಷ ಇನ್ನು ಉಳುಮೆ ಕಂಡಿಲ್ಲ.

ವರುಣ ದೇವನ ಕಣ್ಣಾಮುಚ್ಚಾಲೆಯಿಂದಾಗಿ ಮುಂಗಾರು ಹಂಗಾಮಿನಲ್ಲಿ ಯಾವುದೇ ಬೆಳೆಗಳನ್ನು ಬಿತ್ತನೆ ಮಾಡಲು ಸಾಧ್ಯವಾಗಿಲ್ಲ. ಈಗಾಗಲೇ ರಾಗಿ ಬಿತ್ತನೆಯ ದಿನಗಳು ಸಮೀಪಿಸಿದರೂ ಸಹ ಮಳೆಯಾಗದ ಕಾರಣ ಕೃಷಿ ಜಮೀನು ಉಳುಮೆ ಕಂಡಿಲ್ಲ. ಕಳೆ, ಗಿಡಗಂಟಿಗಳು ಬೆಳೆದು ಪಾಳು ಬಿದ್ದಿವೆ.

ರೈತರು ಮುಂಗಾರು ಬೆಳೆಗಳನ್ನು ಕೈ ಚೆಲ್ಲಿದರೂ ಸಹ ರಾಗಿ ಬಿತ್ತನೆಗೆ ಗೊಬ್ಬರ ಖರೀದಿ ಮಾಡಿ ಮಳೆಗಾಗಿ ಆಕಾಶದತ್ತ ಮುಖಮಾಡಿ ಕುಳಿತಿದ್ದಾರೆ. ಕಳೆದ ಒಂದು ತಿಂಗಳಿನಿಂದ ಮೋಡ ಕವಿದ ವಾತಾವರಣದ ಜೊತೆಗೆ ಅಲ್ಲಲ್ಲಿ ಜಿಡಿಮಳೆ ಹಾಗು ಶೀತ ಗಾಳಿ ಜನರ ಬದುಕಿಗೆ ಸಂಕಷ್ಟ ತಂದೊಡ್ಡಿದೆ.


ಸದ್ಯ ಮಳೆಯ ಕೊರತೆ ಪರಿಣಾಮ ತಾಲ್ಲೂಕಿನಲ್ಲಿ ತಲೆದೋರುತ್ತಿರುವ ಬರದ ಛಾಯೆ ರೈತರ ಬದುಕನ್ನು ಸಂಕಷ್ಟಕ್ಕೆ ದೂಡಿರುವ ಬಗ್ಗೆ ರೈತರ ಅಭಿಪ್ರಾಯಗಳನ್ನು ಇಲ್ಲಿ ನೀಡಲಾಗಿದೆ....





ಪರಿಸರ ಸಂರಕ್ಷಣೆಯೇ ಮಳೆಯ ಮೂಲ ಮಂತ್ರ. ಮಳೆ ಸುರಿದರೆ ಮಾತ್ರ ಧರೆಯ ಸುರಕ್ಷತೆ. ಆದರೆ ಮನುಷ್ಯನು ತನ್ನ ದುರಾಸೆಯಿಂದಾಗಿ ಪರಿಸರದ ಮೇಲೆ ತನಗಿಷ್ಟ ಬಂದಂತೆ ದಾಳಿ ಮಾಡುತ್ತಿದ್ದಾನೆ. ಇದರಿಂದ ಪ್ರಕೃತಿಯು ಸಮತೋಲನ ಕಳೆದುಕೊಂಡಿದ್ದು ವಿಕೋಪಕ್ಕೆ ತುತ್ತಾಗಿ ಮಳೆಯ ಕೊರತೆ ಸೇರಿದಂತೆ ಹಲವಾರು ಬಗೆಯ ಸಮಸ್ಯೆಗಳನ್ನು ಎದುರಿಸುವಂತಾಗಿದೆ. ಇನ್ನಾದರೂ ಎಚ್ಚೆತ್ತುಕೊಂಡು ಪರಿಸರವನ್ನು ಸಂರಕ್ಷಿಸುವಲ್ಲಿ ಮುಂದಾಗಬೇಕು.

**-ಸಿ.ಎನ್.ಅಶೋಕ್,** ಚನ್ನರಾಯಪಟ್ಟಣ (ಪರಿಸರ ಪ್ರೇಮಿ)



ರೈತನಿಗೆ ಮಳೆಯೇ ಆಧಾರ. ಮಳೆ ಕೊರತೆಯು ಕೃಷಿ ಚಟುವಟಿಕೆ ಜೊತೆಗೆ ಹೈನುಗಾರಿಕೆಯ ಮೇಲೂ ಸಾಕಷ್ಟು ಪರಿಣಾಮ ಬೀರುತ್ತಿದೆ. ಜಾನುವಾರುಗಳಿಗೆ ನೀರು, ಮೇವು ಒದಗಿಸಲು ಕಷ್ಟವಾಗುತ್ತಿದೆ. ಮಳೆ ಕೈ ಕೊಡುತ್ತಿದ್ದಂತೆಯೇ ಮೇವಿನ ದರ ಗಗನ ಮುಟ್ಟುತ್ತಿದೆ. 1 ಟನ್ ಮುಸುಕಿನ ಜೋಳದ ಬೆಲೆ 9 ಸಾವಿರ ರೂ. ದಾಟಿದೆ. ಹೈನುಗಾರಿಕೆ ಮಾಡುವುದು ಸಹ ಕಷ್ಟಕರವಾಗಿದೆ. ಮಳೆಯ ಕೊರತೆ, ದಿನಬಳಕೆ ವಸ್ತುಗಳ ಬೆಲೆ ಏರಿಕೆ ಹಾಗೂ ಕೃಷಿ ಚಟುವಟಿಕೆಯ ಹಿನ್ನಡೆ ಪರಿಣಾಮ ಯುವ ಸಮುದಾಯವು ದುಡಿಮೆ ಹರಸಿ ಪಟ್ಟಣ ಪ್ರದೇಶಗಳಿಗೆ ವಲಸೆ ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

**-ಹೆಚ್.ಕೆ.ಗೋವಿಂದರಾಜು,** ಯುವ ರೈತ, ಹೊಸಹಳ್ಳಿ



ಈ ಬಾರಿ ಪೂರ್ವ ಮುಂಗಾರು ಕೈಕೊಟ್ಟಿದ್ದು ರೈತರ ಬವಣೆ ಹೇಳತೀರದಾಗಿದೆ. ಏತ ನೀರಾವರಿ ಯೋಜನೆಯಡಿ ಕೆರೆಕಟ್ಟೆಗಳಿಗೆ ನೀರು ತುಂಬಿಸಿದರೆ ರೈತರ ಸಮಸ್ಯೆ ಬಗೆಹರಿಯಲಿದೆ. ಆದರೆ ಯಾವುದೇ ಜಲಾಶಯಗಳು ನಿರೀಕ್ಷೆಯಂತೆ ತುಂಬಿಲ್ಲ. ಇನ್ನೂ ಕೊಳವೆ ಬಾವಿಗಳಲ್ಲಿಯೂ ನಿರೀಕ್ಷೆ ಯಂತೆ ನೀರು ಲಭ್ಯವಾಗುತ್ತಿಲ್ಲ. ಇದರಿಂದ ಕೃಷಿ ಚಟುವಟಿಕೆ ಹಾಗೂ ಹೈನುಗಾರಿಕೆಗೆ ಸಾಕಷ್ಟು ಹಿನ್ನಡೆಯಾಗುತ್ತಿದೆ. ಈ ಬಗ್ಗೆ ಸರ್ಕಾರದ ಗಮನ ಸೆಳೆದು ಅಗತ್ಯ ಪರಿಹಾರ ತರುವಲ್ಲಿ ಪ್ರಯತ್ನಿಸಲಾಗುವುದು.

**-ಸಿ.ಎನ್.ಬಾಲಕೃಷ್ಣ,** ಶಾಸಕ



ಪ್ರಸಕ್ತ ಸಾಲಿನ ಆಗಸ್ಟ್ ತಿಂಗಳು ಸಮೀಪಿಸಿದರೂ ಇನ್ನೂ ಮರೆಯಾಗದ ಕಾರಣ ಈ ವರ್ಷ ತೀವ್ರ ಬರ ಪರಿಸ್ಥಿತಿ ನಿರ್ಮಾಣವಾಗಲಿದ್ದು ಸರ್ಕಾರವು ಸೂಕ್ತ ಕ್ರಮ ಕೈಗೊಂಡು ರೈತರ ಬದುಕನ್ನು ಮೇಲೆತ್ತಲು ಮುಂದಾಗಬೇಕು. ಮಳೆಯ ಕೊರತೆ ಹಾಗು ಕೊಳವೆ ಬಾವಿಗಳಲ್ಲಿ ನೀರಿನ ಪ್ರಮಾಣ ಗಣನೀಯವಾಗಿ ಕುಸಿಯುತ್ತಿರುವ ಪರಿಣಾಮ ತೆಂಗು ಬೆಳೆಗೂ ಸಹ ಶಾಪವಾಗಿ ಪರಿಣಮಿಸಿದೆ. ಸದ್ಯದಿಂದಲೇ ಮಳೆಯಾದರೆ ಒಂದು ಹಂತಕ್ಕಷ್ಟೇ ಚೇತರಿಕೆ ಕಾಣಲು ಸಾಧ್ಯ.

**-ಪ್ರವೀಣ್,** ವಗರಹಳ್ಳಿ



ಕಳೆದ ವರ್ಷ ನವೆಂಬರ್ ತಿಂಗಳಲ್ಲಿ ಮಳೆ ಕೊನೆಯಾಗಿದ್ದು ಇಲ್ಲಿಗೆ ಸರಿಸುಮಾರು 9 ತಿಂಗಳಾಗಿದೆ. ಇನ್ನೂ ಒಂದು ಹನಿ ಮಳೆ ನೋಡಿಲ್ಲ. ಪರಿಣಾಮ ಮುಂಗಾರು ದಿನಗಳು ಬೇಸಿಗೆಯಂತೆ ರೈತರ ಬದುಕನ್ನು ಸುಡುತ್ತಿವೆ. ಮುಂಗಾರು ಹಂಗಾಮಿನಲ್ಲಿ ಯಾವುದೇ ಬೆಳೆಗಳು ಬಿತ್ತನೆ ಕಂಡಿಲ್ಲ, ಸದ್ಯ ರಾಗಿ ಬಿತ್ತನೆ ಮಾಡಲು ಕೃಷಿ ಜಮೀನು ಹಸನುಗೊಂಡಿಲ್ಲ. ರೈತರ ಬದುಕು ಸಂಕಷ್ಟ ಎದುರಿಸುತ್ತಿದೆ.

**-ಎಂ.ಜೆ.ನಂಜೇಗೌಡ,** ಮಾದಲಗೆರೆ



ಇದೇ ರೀತಿ ಇನ್ನೂ ಒಂದು ತಿಂಗಳು ಮುಂದುವರೆದರೆ ರೈತರ ಬದುಕು ನಿಂತ ನೀರಾಗಲಿದೆ. ಸರ್ಕಾರವು ಇತ್ತ ಗಮನಹರಿಸಿ ವಿಮೆ ಯೋಜನೆಯಡಿ ಎಲ್ಲಾ ರೈತರಿಗೂ ತಲಾ ಒಂದು ಎಕರೆಗೆ 20 ರಿಂದ 25 ಸಾವಿರ ರೂ. ಪರಿಹಾರ ಕಲ್ಪಿಸುವ ಮೂಲಕ ರೈತರನ್ನು ಉಳಿಸುವಲ್ಲಿ ಮುಂದಾಗಬೇಕು.

**-ಹೆಚ್.ಕೆ.ಯೋಗೇಶ್,**
ಜೆಡಿಎಸ್ ಮುಖಂಡ ಉಳ್ಳಾವಳ್ಳಿ



ಕಳೆದ ಒಂದು ತಿಂಗಳಿನಿಂದ ಮೋಡ ಕವಿದ ವಾತಾವರಣದೊಂದಿಗೆ ಮಳೆಯಾಗುವ ಸಾಧ್ಯತೆ ಇದ್ದರೂ ಒಂದು ಹನಿ ನೆಲದ ಮೇಲೆ ಬಿದ್ದಿಲ್ಲ. ಬರದ ಭೀತಿ ರೈತರ ಬದುಕನ್ನು ತೀವ್ರವಾಗಿ ಕಾಡುತ್ತಿದೆ. ಸರ್ಕಾರ ರೈತರ ಬದುಕನ್ನು ಉಳಿಸುವ ನಿಟ್ಟಿನಲ್ಲಿ ಚಿಂತನೆ ಮಾಡಬೇಕಿದೆ.

**-ತುಳಸಿ ರಾಜ್,** ಕರಿಕ್ಯಾತನಹಳ್ಳಿ

## ವಾಯುಭಾರ ಕುಸಿತ: ರಾಜ್ಯದಲ್ಲಿ ಮತ್ತೆ 5 ದಿನ ಬಿರುಗಾಳಿ, ಮಳೆ

ಬೆಂಗಳೂರು: ಸಮುದ್ರ ಮತ್ತು ಭೂಮಿ ಮೇಲ್ಮೈನಲ್ಲಿ ಉಂಟಾಗಿರುವ ಟ್ರಫ್, ವಿವಿಧ ಕಡೆಗಿನ ವಾಯುಭಾರ ಕುಸಿತಗಳ ಪ್ರಭಾವದಿಂದ ಮುಂಗಾರು ಮಳೆ ಮತ್ತಷ್ಟು ಚುರುಕಾಗಿದೆ. ಹಲವು ಜಿಲ್ಲೆಗಳಲ್ಲಿ ಮುಂದಿನ 3 ದಿನ ಬಿರುಗಾಳಿ ಮಳೆ ಸುರಿಯಲಿದ್ದು, ನಂತರ ಎರಡು ದಿನ ಆ. 4ರವರೆಗೆ ಸಾಧಾರಣದಿಂದ ಭಾರೀ ಮಳೆ ಆಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ.

ಉತ್ತರ ಒಳನಾಡಿಗೂ ಭಾರೀ ಮಳೆ ಉತ್ತರ ಒಳನಾಡಿನ ಕೆಲವೆಡೆ ಭಾರೀ, ಉಳಿದೆಲ್ಲ ಕಡೆ ತುಂತುರು ಮಳೆ ಮಾತ್ರವೇ ಆಗುತ್ತಿತ್ತು. ಕಳೆದ ಎರಡು ವಾರಗಳಿಂದ ಮಬ್ಬು ಕವಿದ ವಾತಾವರಣವೇ ಕಂಡು ಬರುತ್ತಿದೆ.

ಬೆಳಗಾವಿ, ಬೀದರ್ ಹಾಗೂ ಕಲಬುರಗಿ ಜಿಲ್ಲೆಗಳ ಒಂದೆರಡು ಸ್ಥಳಗಳಲ್ಲಿ ಗಂಟೆಗೆ 40-50 ಕಿ.ಮೀ. ವೇಗದಲ್ಲಿ ಬಿರುಗಾಳಿ ಸಹಿತ ಭಾರೀ ಮಳೆಯಾಗಲಿದ್ದು, 'ಯೆಲ್ಲೋ ಅಲರ್ಟ್' ಕೊಡಲಾಗಿದೆ. ದಕ್ಷಿಣ ಒಳನಾಡಿನ ಕೊಡಗು, ಹಾಸನ, ಬಳ್ಳಾರಿ, ಬೆಂಗಳೂರು (ಗ್ರಾಮಾಂತರ), ಬೆಂಗಳೂರು (ನಗರ), ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಕೋಲಾರ, ಮಂಡ್ಯ, ಮೈಸೂರು, ರಾಮನಗರದಲ್ಲಿ ಸಾಮಾನ್ಯ ಮಳೆ ಸಂಭವವಿದೆ.





ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಧರ್ಮಪತ್ನಿ ಶ್ರೀಮತಿ ಚನ್ನಮ್ಮ ಅವರ ಉತ್ತರ ಕ್ರಿಯಾಧಿಯಲ್ಲಿ ಗುರುವಾರ ದೇವೇಗೌಡ ಅವರ ಕುಟುಂಬದವರು ಪೂಜಾ ಕೈಂಕರ್ಯಗಳನ್ನು ನೆರವೇರಿಸಿದರು. ಈ ವೇಳೆ ಹಲವು ರಾಜಕೀಯ ಗಣ್ಯರು, ಮಠಾಧೀಶರು, ಅಪಾರ ಸಂಖ್ಯೆಯ ಜನರು ಭಾಗವಹಿಸಿದ್ದರು.



ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಧರ್ಮಪತ್ನಿ ಶ್ರೀಮತಿ ಚನ್ನಮ್ಮ ಅವರ ಸಮಾಧಿ ಬಳಿ ಮೈಸೂರಿನ ಕಲಾವಿದ ಪುನೀತ್ ಹಾಗೂ ರವಿ ಅವರು ಬಣ್ಣ ಬಣ್ಣದ ರಂಗೋಲಿಯಿಂದ ಬಿಡಿಸಿದ ಚನ್ನಮ್ಮ ಅವರ ಚಿತ್ರ ಗಮನಸೆಳೆಯಿತು.

## ಕಾವೇರಿ ಸಂಕಷ್ಟ: ಆ.2 ರಂದು ಸರ್ವಪಕ್ಷ ಸಭೆ

• ಪ್ರಜೋದಯ ವರದಿ



**ನವದೆಹಲಿ:** ಕಾವೇರಿ ನೀರಿನ ಹಂಚಿಕೆ ವಿಚಾರದಲ್ಲಿ ಮುಂದಿನ ನಡೆ ಕುರಿತು ಚರ್ಚಿಸಲು ಬರುವ ಭಾನುವಾರ ಗೃಹ ಕಚೇರಿ ಕೃಷ್ಣಾದಲ್ಲಿ ಸರ್ವ ಪಕ್ಷ ಸಭೆ ಕರೆಯಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಿಳಿಸಿದರು.

ದೆಹಲಿಯ ಕರ್ನಾಟಕ ಭವನದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಂದು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಿದ್ದೇವೆ. ಮುಂದೆ ಈ ವಿಚಾರವನ್ನು ಹೇಗೆ ತೆಗೆದುಕೊಂಡು ಹೋಗಬೇಕೆಂಬುದರ ಬಗ್ಗೆ ಸರ್ವಪಕ್ಷ ಸಭೆಯಲ್ಲಿ ಚರ್ಚೆ ಮಾಡಲಾಗು ವುದು. ರಾಜ್ಯದ ಮಾಜಿ ಮುಖ್ಯಮಂತ್ರಿಗಳು, ಕಾವೇರಿ ಜಲಾನಯನ ಪ್ರದೇಶದ ಸಂಸದರು ಹಾಗು ಶಾಸಕರಿಗೆ ಸಭೆಗೆ ಆಹ್ವಾನ ನೀಡಲಾಗಿದೆ ಎಂದರು.

**ಕೇಂದ್ರ ಸಚಿವರ ಜೊತೆ ಚರ್ಚೆ**

ಕಾವೇರಿ ವಿಚಾರವಾಗಿ ಕೇಂದ್ರ ಸಚಿವರು ಹಾಗು ಸಂಸದರೊಂದಿಗೆ ಚರ್ಚೆ ನಡೆಸಿರುವುದಾಗಿ ತಿಳಿಸಿದ ಅವರು, ಈ ವಿಚಾರವಾಗಿ ಸಂಸದರು, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ವಿ. ಸೋಮಣ್ಣ, ಜಗದೀಶ ಶೆಟ್ಟರ್ ಹಾಗು ಬಸವರಾಜ ಬೊಮ್ಮಾಯಿ ಅವರೊಂದಿಗೆ ಚರ್ಚೆ ಮಾಡಿದ್ದೇನೆ. ರಾಜ್ಯದ ಹಿತಕ್ಕಾಗಿ ಅವರು ಶಕ್ತಿ ಮೀರಿ ಪ್ರಯತ್ನ ಮಾಡುತ್ತಿದ್ದಾರೆ ಎಂದರು.

**ಸಂಪುಟ ವಿಸ್ತರಣೆ ಟೀಕೆಗೆ ತಿರುಗೇಟು:** ಸಚಿವ ಸಂಪುಟ ವಿಸ್ತರಣೆ ವಿಳಂಬ ಕುರಿತು ಬಿಜೆಪಿ ನಾಯಕರು ಮಾಡಿ ರುವ ಟೀಕೆಗೆ ತಿರುಗೇಟು ನೀಡಿದ ಅವರು, ಯಡಿಯೂರಪ್ಪನವರು ಕೂಡ ಸಚಿವ ಸಂಪುಟ ರಚನೆ ಮಾಡದೇ ಅಧಿಕಾರ ನಡೆಸಿರಲಿಲ್ಲವೇ ಆಗ ಅಪ್ಪ-ಮಗ ಅಧಿಕಾರವನ್ನು ಅನುಭವಿಸಲಿಲ್ಲವೇ ಎಂದು ಮರುಪ್ರಶ್ನಿಸಿದರು.

### ತಮಿಳುನಾಡಿಗೆ ನೀರು ಹರಿಸಲು ಸೂಚನೆ | ಮಳೆ ಕೊರತೆಯ ನಡುವೆ ಕರ್ನಾಟಕಕ್ಕೆ ಆಘಾತ

# ಮೇಲ್ಮನವಿ ತಿರಸ್ಕರಿಸಿದ ಸಿಡಬ್ಲ್ಯೂಎಂಎ

• ಪ್ರಜೋದಯ ವರದಿ

**ನವದೆಹಲಿ:** ಮಳೆ ಕೊರತೆಯ ನಡುವೆ ತಮಿಳುನಾಡಿಗೆ 15 ದಿನ 3,500 ಕ್ಯೂಸೆಕ್ ನೀರು ಹರಿಸುವಂತೆ ನೀಡಿದ್ದ ಕಾವೇರಿ ನೀರು ನಿಯಂತ್ರಣ ಸಮಿತಿ ಆದೇಶದ ವಿರುದ್ಧ ಕರ್ನಾಟಕ ಸಲ್ಲಿಸಿದ್ದ ಮೇಲ್ಮನವಿಯನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ತಿರಸ್ಕರಿಸಿದೆ. ಸಿಡಬ್ಲ್ಯೂಆರ್‌ಸಿ ಆದೇಶವನ್ನೇ ಎತ್ತಿ ಹಿಡಿದಿರುವುದರಿಂದ ಕರ್ನಾಟಕಕ್ಕೆ ಮತ್ತೊಮ್ಮೆ ಹಿನ್ನಡೆಯಾಗಿದೆ.



ದೆಹಲಿಯಲ್ಲಿ ಗುರುವಾರ ನಡೆದ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ತುರ್ತು ಸಭೆಯಲ್ಲಿ ಕರ್ನಾಟಕದ ಪರವಾಗಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ ಸೇರಿ ಇತರೆ ಅಧಿಕಾರಿಗಳು ಪ್ರಬಲ ವಾದ ಮಂಡಿಸಿದರು.

ಸಿಡಬ್ಲ್ಯೂಎಂಎ ಅಧ್ಯಕ್ಷ ಎಸ್.ಕೆ.ಹಲ್ದಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕರ್ನಾಟಕವು ಸಿಡಬ್ಲ್ಯೂಆರ್‌ಎ ಆದೇಶವನ್ನು ಮರುಪರಿಶೀಲಿಸುವಂತೆ ಮನವಿ ಮಾಡಿತು. 2026ರ ಜುಲೈ 29ರ ವೇಳೆಗೆ ಕರ್ನಾಟಕದ ಜಲಾಶಯಗಳಲ್ಲಿ 52 ಟಿಎಂಸಿ ನೀರು ಸಂಗ್ರಹವಿದ್ದು, ತಮಿಳುನಾಡಿನ ಮೂರು ಜಲಾಶಯಗಳಲ್ಲಿ ಸುಮಾರು 43 ಟಿಎಂಸಿ ನೀರು ಸಂಗ್ರಹವಾಗಿದೆ.

2026ರ ಜೂನ್ 1ರಂದು (ಜಲ ವರ್ಷಾರಂಭದ ದಿನ) ಕಾವೇರಿ ಜಲಾನಯನ ಪ್ರದೇಶದಲ್ಲಿರುವ ಕರ್ನಾಟಕದ ನಾಲ್ಕು ಪ್ರಮುಖ ಜಲಾಶಯಗಳಲ್ಲಿ 23.663 ಟಿಎಂಸಿ ನೀರು ಸಂಗ್ರಹ ವಿದ್ದರೆ, ತಮಿಳುನಾಡಿನ ಕಾವೇರಿ ಜಲಾನಯನ ಪ್ರದೇಶದ ಜಲಾಶಯಗಳಲ್ಲಿ 47.850 ಟಿಎಂಸಿ ನೀರು ಸಂಗ್ರಹವಿತ್ತು. ಆದರೆ, ಸೂಪರ್ ಎಲ್‌ನಿನೋ ಪರಿಣಾಮ ದಿಂದ ನೈಋತ್ಯ ಮುಂಗಾರು ಮಳೆಯ ಕೊರತೆ ಉಂಟಾಗಿ ಸಂಕಷ್ಟದ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಪರಿಣಾಮವಾಗಿ 2026ರ ಜೂನ್ 1ರಿಂದ ಜುಲೈ 29ರ ವರೆಗೆ ಕರ್ನಾಟಕದ ನಾಲ್ಕು ಪ್ರಮುಖ ಜಲಾಶ ಯಗಳಿಗೆ ಹರಿದು ಬಂದ ನೀರಿನ ಪ್ರಮಾಣ ಕೇವಲ 38.736 ಟಿಎಂಸಿಯಾಗಿದ್ದು, ಇದು ದೀರ್ಘಾವಧಿಯ ಸರಾಸರಿ ಒಳ ಹರಿವು 112. 757 ಟಿಎಂಸಿಗೆ ಹೋಲಿಸಿದರೆ 65.65 ಶೇಕಡಾ ಕಡಿಮೆ ಯಾಗಿದೆ ಎಂದು ವಾದ ಮಂಡಿಸಿದರು.

ಈ ರೀತಿಯ ತೀವ್ರ ಸಂಕಷ್ಟದ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಕರ್ನಾಟಕ ಸರ್ಕಾರವು ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಾವರಿ ಉದ್ದೇಶಕ್ಕಾಗಿ ಯಾವುದೇ ನೀರನ್ನು ಬಿಡುಗಡೆ ಮಾಡಿಲ್ಲ. ಸಾಮಾನ್ಯ ಜಲ ವರ್ಷದಲ್ಲಿ, ಅಂತಾರಾಜ್ಯ ಗಡಿ ಪ್ರದೇಶವಾದ ಬಿಳಿಗುಂಡ್ಲುವಿನಲ್ಲಿ ಜೂನ್ ಹಾಗು ಜುಲೈ ತಿಂಗಳಲ್ಲಿ ಕ್ರಮವಾಗಿ 9.19 ಟಿಎಂಸಿ ಮತ್ತು 31.24 ಟಿಎಂಸಿ ನೀರಿನ ಹರಿವು ಖಚಿತಪಡಿಸಬೇಕಾಗುತ್ತದೆ. ಆದರೆ, ಪ್ರಸ್ತುತ ಇರುವ ಬರ ಹಾಗು ನೀರಿನ ಕೊರತೆಯ ಪರಿಸ್ಥಿತಿಯನ್ನು ಪರಿಗಣಿಸಿ, ಸಿಡಬ್ಲ್ಯೂಆರ್‌ಎ ಆದೇಶವನ್ನು ಮರುಪರಿ ಶೀಲಿಸುವಂತೆ ಕರ್ನಾಟಕ ಸರ್ಕಾರ ಮನವಿ ಮಾಡಿತು.

**ರಾಜ್ಯಕ್ಕೆ ಕಾವೇರಿ ಆಘಾತ**

**ರಾಜ್ಯಾದ್ಯಂತ ತೀವ್ರ ಮಳೆ ಕೊರತೆಯಿಂದಾಗಿ ಕಾವೇರಿ ಜಲಾನಯನ ಪ್ರದೇಶದ ಜಲಾಶ ಯಗಳಲ್ಲಿ ನೀರಿನ ಮಟ್ಟ ಕುಸಿದಿದ್ದು, ಜನಸಾಮಾನ್ಯರು ಹಾಗೂ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇಂತಹ ಗಂಭೀರ ಪರಿಸ್ಥಿತಿಯ ನಡುವೆಯೂ ಕರ್ನಾಟಕಕ್ಕೆ ಮತ್ತೊಂದು ದೊಡ್ಡ ಕಾವೇರಿ ಆಘಾತ ಎದುರಾಗಿದೆ.**

**ತಮಿಳುನಾಡು ಅಧಿಕಾರಿಗಳ ಪ್ರತಿವಾದ**

ವರ್ಚುವಲ್ ಮೂಲಕ ಭಾಗಿಯಾಗಿರುವ ತಮಿಳುನಾಡು ಅಧಿಕಾರಿಗಳು, ಸಿಡಬ್ಲ್ಯೂಆರ್‌ಸಿ ಅತೀ ಕಡಿಮೆ ನೀರು ಬಿಡುವ ಆದೇಶ ಮಾಡಿದೆ. 3500 ಕ್ಯೂಸೆಕ್ ನೀರು ಹರಿಸುವಂತೆ ಶಿಫಾರಸು ಮಾಡಿದೆ. ಸಿಡಬ್ಲ್ಯೂಆರ್‌ಸಿ ಆದೇಶ ಬದಿಗಿರಿಸಿ ಹೆಚ್ಚುವರಿ ನೀರು ಹರಿಸುವಂತೆ ಕರ್ನಾಟಕಕ್ಕೆ ನಿರ್ದೇಶನ ನೀಡಬೇಕು. ಕರ್ನಾಟದ ಡ್ಯಾಂಗಳಿಗೆ ಒಟ್ಟು ಒಳಹರಿವು 36 ಟಿಎಂಸಿ ಯಷ್ಟಿದೆ. ವಾಡಿಕೆ ಮಳೆಯಾಗಿದ್ದರೆ ತಮಿಳುನಾಡಿಗೆ ಇಷ್ಟು ಹೊತ್ತಿಗೆ 40 ಟಿಎಂಸಿ ನೀರು ಹರಿಸಬೇಕಿತ್ತು. ಸಂಕಷ್ಟ ಸೂತ್ರವನ್ನು ಕರ್ನಾಟಕ ಸರಿಯಾಗಿ ಪಾಲಿಸಿಲ್ಲ.

ಸಂಕಷ್ಟ ಸೂತ್ರದ ಅನ್ವಯಕ್ಕಿಂತ ಕಡಿಮೆ ನೀರು ಹರಿಸಿದೆ. 2 ತಿಂಗಳಲ್ಲಿ ಬಿಲಿಗುಂಡ್ಲುದಲ್ಲಿ ಕೇವಲ 3.5ಟಿಎಂಸಿ ನೀರು ಮಾತ್ರ ಹರಿದಿದೆ. ಸಂಕಷ್ಟ ಸೂತ್ರ ಅನ್ವಯ 9.46 ಟಿಎಂಸಿ ಬಾಕಿ ಉಳಿಸಿಕೊಂಡಿದೆ ಎಂದು ಪ್ರತಿವಾದ ಮಂಡಿಸಿದರು.

## ಕಾಡಾನೆಗಳಿಂದ ತಪ್ಪಿಸಿಕೊಳ್ಳುವ ವೇಳೆ ಬಿದ್ದು ಗಾಯ

• ಪ್ರಜೋದಯ ವರದಿ

**ಅರೇಹಳ್ಳಿ:** ರಸ್ತೆ ದಾಟುತ್ತಿದ್ದ ಕಾಡಾನೆಗಳ ಹಿಂಡನ್ನು ಕಂಡು ಗಾಬರಿಯಿಂದ ತಪ್ಪಿಸಿಕೊಳ್ಳಲು ಓಡಿದ ಮಹಿಳೆ ಎಡವಿ ಬಿದ್ದು ಗಾಯಗೊಂಡ ಘಟನೆ ಕೋಗೋಡು ಸಮೀಪ ನಡೆದಿದೆ. ಘಟನೆಯ ದೃಶ್ಯ ಸಮೀಪದ ಎಸ್ಟೇಟ್‌ನ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.



ಸಂಜೆ ವೇಳೆಗೆ ಚೀಕನಹಳ್ಳಿಯಿಂದ ಬೈಕ್‌ನಲ್ಲಿ ಮನೆಗೆ ತೆರಳುತ್ತಿದ್ದ ರಾಜು ಮತ್ತು ವಿಮಲ ದಂಪತಿ ಎದುರು ಏಕಾಏಕಿ ಸುಮಾರು 25ಕ್ಕೂ ಹೆಚ್ಚು ಕಾಡಾನೆಗಳ ಹಿಂಡು ರಸ್ತೆ ದಾಟಿದೆ. ಕಾಡಾನೆಗಳನ್ನು ಕಂಡು ಆತಂಕಗೊಂಡ ಬೈಕ್‌ನ ಹಿಂಬದಿಯಲ್ಲಿ ಕುಳಿತಿದ್ದ ಮಹಿಳೆ ಬೈಕ್‌ನಿಂದ ಇಳಿದು ಓಡಿ ತಪ್ಪಿಸಿಕೊಳ್ಳಲು ಯತ್ನಿಸಿದ್ದಾರೆ. ಈ ವೇಳೆ ಗಾಬರಿಯಿಂದ ರಸ್ತೆಯಲ್ಲೇ ಎಡವಿ ಬಿದ್ದ ಪರಿಣಾಮ ತಲೆಗೆ ಹಾಗು ದೇಹದ ಹಲವೆಡೆ ಗಾಯಗಳಾಗಿವೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಘಟನೆಯ ಸಂಪೂರ್ಣ ದೃಶ್ಯ ಸಮೀಪದ ಬೆಡಿ ಸರ್ ಎಸ್ಟೇಟ್‌ನ ಸಿಸಿ ಕ್ಯಾಮೆರಾದಲ್ಲಿ ದಾಖಲಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಕಾಡಾನೆಗಳ ಹಾವಳಿ ನಿಯಂತ್ರಿಸಿ ಸಾರ್ವಜನಿಕರ ಸುರಕ್ಷತೆಗೆ ಅಗತ್ಯ ಕ್ರಮಕೈಗೊಳ್ಳುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ. ಅರೇಹಳ್ಳಿ ಹೋಬಳಿ ವ್ಯಾಪ್ತಿಯ ಕೋಗೋಡು ಭಾಗದಲ್ಲಿ ಇತ್ತೀಚಿನ ದಿನಗಳಲ್ಲಿ ಕಾಡಾನೆಗಳ ಸಂಚಾರ ಹೆಚ್ಚಾಗಿದ್ದು, ಬೆಳೆ ಹಾನಿಯ ಘಟನೆಗಳು ನಿರಂತರವಾಗಿದೆ.

## ಸಮಾಧಿ ಸ್ಥಳ ನಾಡಿನ ಜನರಿಗೆ ಅರ್ಪಣೆ : ಹೆಚ್.ಡಿ.ಕೆ.

» ಮೊದಲನೇ ಪುಟದಿಂದ

ಮುಖ್ಯವಲ್ಲ, ಈ ಭೂಮಿ ಇರುವರೆಗೂ ಆ ಕಾರ್ಯಕ್ರಮಗಳು ಇರಬೇಕೆಂಬುದು ನಮ್ಮ ಆಶಯವಾಗಿದೆ ಎಂದು ಹೇಳಿದರು.

ಮಾವಿನಕೆರೆ ಶ್ರೀ ರಂಗನಾಥ ಸ್ವಾಮಿ ನಮ್ಮ ತಂದೆ ತಾಯಿಯ ಆರಾಧ್ಯದೈವ. ನಮ್ಮ ತಂದೆಯವರ ರಾಜಕೀಯ ಬೆಳವಣಿಗೆಯಲ್ಲಿ ರಂಗನಾಥ ಸ್ವಾಮಿ ಹಾಗು ಹರದನಹಳ್ಳಿಯ ದೇವೇಶ್ವರ ಸ್ವಾಮಿಯ ಕರುಣೆ ಇದೆ ಎಂದು ಅವರು ಬಲ ವಾಗಿ ನಂಬಿದ್ದಾರೆ. ಹೀಗಾಗಿ ನಮ್ಮ ತಾಯಿ ಮಾವಿನಕೆರೆ ಶ್ರೀರಂಗನಾಥ ಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ಶಾಶ್ವತ ಚಿರನಿದ್ರೆಗೆ ಹೋಗುವಂತೆ ಆಗಿದ್ದು, ದೈವದ ಅನುಗ್ರಹವೇ ಕಾರಣವೆಂದು ನಂಬಿದ್ದೇನೆಂದು ಹೇಳಿದರು.

ನಮ್ಮ ತಾಯಿ ಸಾಮಾನ್ಯ ಮಹಿಳೆಯಂತೆ ಜೀವಿಸಿದರು. ನಮ್ಮ ತಂದೆಯವರು ಮುಖ್ಯಮಂತ್ರಿ, ಪ್ರಧಾನಮಂತ್ರಿ ಆಗಿದ್ದಾಗಲೂ ಅವರು ಹಾಗೆಯೇ ಇದ್ದರು. ರಾಜಕಾರಣದಿಂದ ದೂರವಿದ್ದು, ಮನೆಗೆ ಶಕ್ತಿಯಾಗಿದ್ದರು. ಹರದನಹಳ್ಳಿ ಮತ್ತು ಹೊಳೆನರಸೀಪುರದಲ್ಲಿ ಕಷ್ಟದ ಪರಿಸ್ಥಿತಿಯಲ್ಲಿ ಇದ್ದಾಗಲೂ ನಮಗೆ ಗಂಜಿ ಕೊಟ್ಟು ಮನೆಗೆ ಬಂದವರಿಗೆ ಅನ್ನ ನೀಡುತ್ತಿದ್ದರು. ಅಂತಹ ತಾಯಿಯ ಮಗನಾಗಿ ಹುಟ್ಟಿದ್ದು ನನ್ನ ಸುಕೃತವೇ ಆಗಿದೆ ಎಂದು ಭಾವೋದ್ವೇಗಕ್ಕೆ ಒಳಗಾದರು.

ದಿನದ 24 ಗಂಟೆ ನಮ್ಮ ಕುಟುಂಬ ರಾಜಕೀಯದಲ್ಲೇ ಮುಳುಗಿದ್ದರೋ ಎಂದು ರಾಜಕೀಯವನ್ನು ಸೋಕಿಸಿಕೊಳ್ಳದೆ ಸಾಮಾನ್ಯ ಮಹಿಳೆಯಾಗಿ ಜೀವಿಸಿದರು. ಹಳ್ಳಿಗಳಲ್ಲಿ ನಮ್ಮ ಪೂರ್ವಿಕರು ಕಾಪಾಡಿ ಕೊಂಡು ಬಂದಿರುವ ಸಂಪ್ರದಾಯವನ್ನು ತಮ್ಮ ಬದುಕಿನಲ್ಲಿ ಅಳಡಿಸಿಕೊಂಡು ಬಂದಿದ್ದಾರೆ. ದೇವೇಗೌಡರು ಪ್ರಧಾನ ಮಂತ್ರಿ ಹುದ್ದೆಗೇರಿದರೂ ಸಹ ನಾನು ಪ್ರಧಾನಿಯ ಪತ್ನಿ ಎಂಬ ಭಾವನೆ ಇರಲಿಲ್ಲ, ಆ ಸಂದರ್ಭದಲ್ಲಿ ಸಾಮಾನ್ಯ ಬದುಕು ಸಾಗಿಸಿದ್ದಾರೆ ಎಂದರು.



## ಮಹಿಳೆ ಕೊರಳಿಂದ ಚಿನ್ನದ ಸರ ದೋಚಿ ಪರಾರಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಮಹಿಳೆಯನ್ನು ಅಡ್ಡಗಟ್ಟಿದ ಅಪರಿಚಿತರಿಬ್ಬರು ಅಂದಾಜು 95 ಗ್ರಾಂ ತೂಕದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಪಟ್ಟಣದಲ್ಲಿ ನಡೆದಿದೆ.

ಹಾಸನದ ವಿಶ್ವೇಶ್ವರಯ್ಯ ಬಡಾವಣೆ ನಿವಾಸಿ ಆಶಾ ಸರ ಕಳೆದುಕೊಂಡವರು. ಕಾರ್ಯನಿಮಿತ್ತ ನುಗ್ಗೇಹಳ್ಳಿಗೆ ತೆರಳಿದ್ದ ಅವರು ಬುಧವಾರ ರಾತ್ರಿ 9ರ ಸಮಯದಲ್ಲಿ ಕೆಎಸ್‌ಆರ್‌ಟಿಸಿ ಬಸ್ ಮೂಲಕ ಪಟ್ಟಣಕ್ಕೆ ಬಂದಿದ್ದರು. ನಂತರ ಕರ್ಣಾಟಕ ಬ್ಯಾಂಕ್ ಹತ್ತಿರದ ಬೇಕರಿಯಲ್ಲಿ ಮನೆಗೆ ಸಿಹಿ ತಿನಿಸು ಖರೀದಿಸಿ ಪುನ: ಬಸ್ ನಿಲ್ದಾಣಕ್ಕೆ ಬರುತ್ತಿದ್ದಾಗ ಎದುರುಗಡೆಯಿಂದ ಬೈಕ್‌ನಲ್ಲಿ ಬಂದ ಇಬ್ಬರು ಅಪರಿಚಿತರು ಅಡ್ಡಗಟ್ಟಿದ್ದಾರೆ. ಹಿಂದೆ ಕುಳಿತಿದ್ದ ವ್ಯಕ್ತಿ ಏಕಾಏಕಿ ಕೆಳಗಿಳಿದು ಚಿನ್ನದ ಸರ ಕಿತ್ತುಕೊಂಡು ಬೈಕ್ ಏರಿ ಪರಾರಿಯಾಗಿದ್ದಾನೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನೀರಿನ ಬಕೆಟ್‌ಗೆ ಬಿದ್ದು ಮಗು ಸಾವು



• ಪ್ರಜೋದಯ ವರದಿ

**ಹಾಸನ:** ನೀರು ತುಂಬಿದ್ದ ಬಕೆಟ್‌ನಲ್ಲಿ ಬಿದ್ದು ಎಂಟು ತಿಂಗಳ ಹೆಣ್ಣು ಮಗು ಮೃತಪಟ್ಟ ದಾರುಣ ಘಟನೆ ನಗರದ ವಲ್ಲಭಾಯಿ ರಸ್ತೆಯಲ್ಲಿ ನಡೆದಿದೆ.

ಪುಷ್ಪಾಲೋಚನ (8 ತಿಂಗಳು) ಮೃತ ಮಗು. ಗಿರೀಶ್ ಮತ್ತು ಚೈತ್ರಾ ದಂಪತಿಯ ಮೂರನೇ ಪುತ್ರಿಯಾಗಿದ್ದು, ಗಿರೀಶ್ ಚಿನ್ನಬೆಳ್ಳಿ ಕೆಲಸ ಮಾಡುತ್ತಿದ್ದು, ದಂಪತಿಗೆ ಮೂವರು ಹೆಣ್ಣುಮಕ್ಕಳಿದ್ದಾರೆ.

ಮನೆಯಲ್ಲಿದ್ದ ಬಕೆಟ್‌ಗೆ ಬಟ್ಟೆಗಳನ್ನು ನೆನೆಸಿಟ್ಟು ಚೈತ್ರಾ ಸ್ನಾನಕ್ಕೆ ತೆರಳಿದ್ದ ವೇಳೆ, ತೆವಳುತ್ತಾ ಬಂದ ಪುಷ್ಪಾಲೋಚನ ಬಕೆಟ್‌ನಲ್ಲಿ ಬಿದ್ದಿರುವ ಶಂಕೆ ವ್ಯಕ್ತವಾಗಿದೆ. ಕೆಲ ಹೊತ್ತಿನ ಬಳಿಕ ಗಮನಿಸಿದ ಕುಟುಂಬದವರು ಮಗುವನ್ನು ಹೊರತೆಗೆದರೂ ಅಷ್ಟರಲ್ಲಾಗಲೇ ಮಗು ಮೃತ ಪಟ್ಟಿತ್ತು. ಮಾಹಿತಿ ತಿಳಿದು ಸ್ಥಳಕ್ಕೆ ಪೆನ್ಷನ್ ಮೊಹಲ್ಲಾ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

## ಸರ್ಕಾರಿ ಕೆಲಸಕ್ಕಿಂತ ಸ್ವಯಂ ಉದ್ಯೋಗವೇ ಲೇಸು



• ಪ್ರಜೋದಯ ವರದಿ

**ಅರಕಲಗೂಡು:** ಇಂದಿನ ಸ್ಥಿತಿಯಲ್ಲಿ ಸರ್ಕಾರಿ ಕೆಲಸಕ್ಕಿಂತ ಸ್ವಯಂ ಉದ್ಯೋಗವೇ ಲೇಸು. ನಿವೃತ್ತಿ ಎಂಬುದು ಒಂದು ಕಡೆ ದುಃಖ ಎನಿಸಿದರೆ ಮತ್ತೊಂದು ಕಡೆ ಸಂತೋಷವೆಂದು ತಹಶೀಲ್ದಾರ್ ಕೆ.ಸಿ. ಸೌಮ್ಯ ಅವರು ತಿಳಿಸಿದರು.

ಪಟ್ಟಣದ ಅರಸು ಭವನದಲ್ಲಿ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಮಾತನಾ ಡಿದ ಅವರು, ರೇಷ್ಮೆ ಇಲಾಖೆಯ ಸಹಾ ಯಕ ನಿರ್ದೇಶಕರಾಗಿ ಸೇವೆ ಸಲ್ಲಿಸಿ ವಯೋ ನಿವೃತ್ತಿ ಹೊಂದುತ್ತಿರುವ ಸೀತಾರಾಮ ಭಟ್ಟರ ಕಾರ್ಯವೈಖರಿಯನ್ನು ಗಮನಿಸಿದ್ದೇನೆ. ಸರ್ಕಾರದಿಂದ ದೊರೆಯುವ ಸವಲತ್ತುಗಳನ್ನು ಸಕಾಲಿಕವಾಗಿ ರೈತರಿಗೆ ಕಲ್ಪಿಸಿ ಜನಸ್ನೇಹಿ ಅಧಿಕಾರಿಯಾಗಿ ಹೆಸರು ಗಳಿಸಿರುವುದು ಇತರೆ ಅಧಿಕಾರಿಗಳಿಗೆ ಮಾರ್ಗದರ್ಶನವಾಗಿದೆ ಎಂದರು.

ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ರಾಜೇಶ್ ಅವರು ಮಾತನಾಡಿ, ಸೀತಾರಾಮ ಭಟ್ಟರವರು ಕಾನೂನು ಕಟ್ಟ ಪರಿಪಾಲಕರು ಮತ್ತು ನಿಷ್ಠೂರವಾದಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಸರ್ಕಾರಿ ಯೋಜನೆಗಳಿಂದ ರೈತರನ್ನು ಗೆಲ್ಲಲು ಸಾಧ್ಯವಿಲ್ಲ ನಮ್ಮ ನಡವಳಿಕೆಯಿಂದ ಮತ್ತು ರೈತರಿಗೆ ನೀಡುವ ಮಾರ್ಗದರ್ಶನದಿಂದ ಮಾತ್ರ ಸಾಧ್ಯ ಎಂದು ಹೇಳಿದರು.

ರೇಷ್ಮೆ ಇಲಾಖೆ ಉಪ ನಿರ್ದೇಶಕ ಜಗದೀಶ್ ಅವರು ಮಾತನಾಡಿ, ಸರ್ಕಾರಿ ನೌಕರರು ತಮ್ಮ ವೃತ್ತಿ ಜೀವನದಲ್ಲಿ ನಿವೃತ್ತಿ ಆಗುವುದು ನಿಯಮ. ನಿಷ್ಠಾವಂತ ಮತ್ತು ದಕ್ಷ ಅಧಿಕಾರಿಗಳನ್ನು ಬಿಳ್ಕೊಡುವುದು ಬೇಸರದ ಸಂಗತಿ ಎಂದರು.

ರೇಷ್ಮೆ ಬೆಳೆಗಾರ ರವಿ ಮಾತನಾಡಿ, ರೇಷ್ಮೆ ಸಾಕಾಣಿಕೆ ವಿಶೇಷ ಬೆಳೆಯಾಗಿದ್ದು, ತಾಲ್ಲೂಕಿನಲ್ಲಿ ಅತಿ ಹೆಚ್ಚು ರೇಷ್ಮೆ ಬೆಳೆಗಾರರ ಶ್ರೇಯೊಭಿವೃದ್ಧಿಗೆ ಸೀತಾರಾಮ ಭಟ್ಟರು ಹೆಚ್ಚಿನ ಸಹಕಾರ ನೀಡುತ್ತಾ ರೈತರು ಆದಾಯಗಳಿಸಲು ಮಾರ್ಗದರ್ಶನ ನೀಡುತ್ತಿದ್ದರು. ಅವರ ನಿವೃತ್ತಿ ಜೀವನ ಆರೋಗ್ಯಕರವಾಗಿರಲಿ ಎಂದರು.

ಬಿಳ್ಕೋಡುಗೆ ಸ್ವೀಕರಿಸಿ ಮಾತನಾಡಿದ ಸೀತಾರಾಮ ಭಟ್ಟ ಅವರು, ನಾನು ಪದವಿ ಓದುವಾಗ ಒಂದು ಶಪಥ ಮಾಡಿದ್ದೆ ನಾನು ಯಾರಿಂದಲೂ ಒಂದು ರೂಪಾಯಿ ಲಂಚ ಪಡೆಯುವುದಿಲ್ಲ ಎಂದು ಅದರಂತೆ ಇಂದಿನ ವರೆಗೂ ಒಂದು ರೂಪಾಯಿ ಯಾರಿಂದಲೂ ಲಂಚ ಪಡೆಯದೆ ಇಂದು ನಿವೃತ್ತಿ ಹೊಂದುತ್ತಿದ್ದೇನೆ. ಇದು ನನ್ನ ವೃತ್ತಿ ಜೀವನದಲ್ಲಿ ಅತೀ ಸಂತಸಕೊಟ್ಟಿದೆ ಎಂದು ಹೇಳಿದರು.

ರೈತ ಮಹಿಳೆ ಕಮಲಮ್ಮ, ಚಾಕಿ ಕೇಂದ್ರ ಚಂದ್ರು, ದೇವರಾಜ್, ಸಿಡಿಪಿಒ ವೆಂಕಟೇಶ್, ಪತ್ರಕರ್ತ ಎ.ಪಿ.ಶಂಕರ್, ರಾಜೇಗೌಡ, ರೇಷ್ಮೆ ಇಲಾಖೆ ವಿಸ್ತರಾಣಾಧಿಕಾರಿ, ಸಿಬ್ಬಂದಿ ಮತ್ತು ರೈತ ಮುಖಂಡರು ಇದ್ದರು.

## ತಮಿಳುನಾಡಿಗೆ ನೀರು ಹರಿಸಿ ವಾಟರ್ ಮ್ಯಾನ್ ಆಗ್ಬೇಡಿ: ಸಿ.ಟಿ. ರವಿ

» ಮೊದಲನೇ ಪುಟದಿಂದ

ಹೇಳಿದ್ದಾರೆ. ಅಂತಹ ಪಾಕಿಸ್ತಾನವನ್ನೇ ಬಗ್ಗು ಬಡಿಯುವ ಸಾಮರ್ಥ್ಯ ನಮಗಿದೆ. ಪಿಒಕೆಯಲ್ಲೂ ಭಾರತಪರ ಘೋಷಣೆಗಳು ಕೇಳಿಬರುತ್ತಿವೆ. ಇಂತಹ ಸಂದರ್ಭದಲ್ಲಿ ನನಗೆ ಬೆದರಿಕೆ ಹಾಕುವವರಿಗೆ ಹೆದರುತ್ತೇನಾ ಎಂದು ವಾಗ್ದಾಳಿ ನಡೆಸಿದರು.

ನಾನು ಈ ಮಣ್ಣಿನ ಮಗ. ಯಾವುದೋ ಪೊಳ್ಳುಗಳಿಗೆ ಹೆದರಿ ರಾಜಕೀಯ ಮಾಡುತ್ತಿಲ್ಲ. ನನಗೆ ಸಮಸ್ಯೆ ಮಾಡುವವರನ್ನು ಹೆದರಿಸಿ ರಾಜಕಾರಣ ಮಾಡುವುದು ಗೊತ್ತಿದೆ. ಇಂತಹವರ ಬೆದರಿಕೆಗೆ ಯಾವ ಕಾರಣಕ್ಕೂ ಹೆದರುವುದಿಲ್ಲವೆಂದರು.

**ರಾಹುಲ್, ಸೋನಿಯಾ ಆದೇಶ ಪಾಲನೆ**

ಕಾಂಗ್ರೆಸ್‌ನ ಕೆಲವು ನಾಯಕರಿಗೆ ತಮ್ಮ ಪಕ್ಷದ ನಾಯಕರಾದ ರಾಹುಲ್ ಗಾಂಧಿ, ಸೋನಿಯಾಗಾಂಧಿ, ಪ್ರಿಯಾಂಕಾ ಗಾಂಧಿ ಹೇಳಿದ ಹಾಗೆ ಪುನರ್ ಉಚ್ಚರಿಸುವ ಕರ್ಮ ಎದುರಾಗಿದೆ. ಅವರು ಕಾಗೆ ಬೆಳ್ಳಗೆ ಇದೆ ಎಂದರೆ, ದೇಶದಲ್ಲಿರುವ ಎಲ್ಲಾ ಕಾಂಗ್ರೆಸ್ಸಿಗರು ಕಾಗೆ ಬೆಳ್ಳಗಿದೆ ಅಂತಾರೆ. ಅದು ಅವರ ಕರ್ಮ. ರಾಜ್ಯದ ಕಾಂಗ್ರೆಸ್ ನಾಯಕರನ್ನು ಹೈಕಮಾಂಡ್ ಜೀತದಾಳುಗಳ ರೀತಿ ನೋಡುತ್ತಿದೆ. ಜೀತದಾಳುಗಳಿಗೆ ಸ್ವಾಭಿಮಾನ ಇರುತ್ತೆ. ಆದರೆ, ಕಾಂಗ್ರೆಸ್‌ಗೆ ಅದು ಇಲ್ಲವೇ ಇಲ್ಲವೆಂದರು.

ಪ್ರಲ್ಹಾದ್ ಜೋಶಿ ಶಿಕ್ಷಣ ಸಚಿವರಾಗಿದ್ದಕ್ಕೆ ಕಾಂಗ್ರೆಸ್‌ನವರಿಗೆ ಸಹಿಸಲು ಆಗುತ್ತಿಲ್ಲ. ಜೋಶಿ ಅವರ ವಿರುದ್ಧ ಯಾವುದೇ ಭ್ರಷ್ಟಾಚಾರ ಆರೋಪಗಳಿಲ್ಲ. ಅಂತಹ ನಾಯಕರ ಏಳಿಗೆಯನ್ನು ಸಹಿಸದ ಕಾಂಗ್ರೆಸ್‌ನವರ ಮನಸ್ಥಿತಿಗೆ ಏನು ಹೇಳಬೇಕೆಂದು ಗೊತ್ತಾಗುತ್ತಿಲ್ಲ. ಕರ್ನಾಟಕ ಭ್ರಷ್ಟಾಚಾರಕ್ಕೆ ಹೆಸರಾದಾಗ, ಭಯೋತ್ಪಾದಕರ ತಾಣವಾದಾಗ, ಡ್ರಗ್ಸ್ ಕ್ಯಾಪಿಟಲ್ ಆಗಿ ಪರಿವರ್ತನೆ ಆದಾಗ, ಬೆಂಗಳೂರು ಗಾರ್ಬೆಜ್ ಸಿಟಿ ಆದಾಗ ತಲೆ ತಗ್ಗಿಸದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈಗ ಹೇಗೆ ಅವಮಾನವಾಗುತ್ತಿದೆ ಎಂದು ವಾಗ್ದಾಳಿ ನಡೆಸಿದರು.

## ಪತ್ರಕರ್ತರು ವೃತ್ತಿಯ ಜೊತೆಗೆ ಆರೋಗ್ಯಕ್ಕೂ ಆದ್ಯತೆ ನೀಡಿ



• ಪ್ರಜೋದಯ ವರದಿ

**ಬೇಲೂರು:** ಪತ್ರಕರ್ತ ಎ.ರವಿಹೊಳ್ಳ ಅವರ ಕಣ್ಣಿನ ಚಿಕಿತ್ಸೆಗೆ ನೆರವಾಗುವ ಉದ್ದೇಶದಿಂದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಸಮಿತಿ ಸದಸ್ಯರು ಹಾಗೂ ಬೇಲೂರು ಉಸ್ತುವಾರಿ ಕೆಪಿಎಸ್ ಪ್ರಮೋದ್ ಅವರು 10,000 ಧನಸಹಾಯವನ್ನು ಹಸ್ತಾಂತರಿಸಿದರು.

ಪಟ್ಟಣದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲ್ಲೂಕು ಘಟಕದ ವತಿಯಿಂದ ಹಮ್ಮಿಕೊಂಡಿದ್ದ ಪತ್ರಕರ್ತರ ದಿನಾಚರಣೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಪತ್ರಕರ್ತರು ಸಮಾಜದ ಕಣ್ಣು ಮತ್ತು ಕಿವಿಯಾಗಿದ್ದು, ವೃತ್ತಿ ನಿರ್ವಹಣೆಯ ಜೊತೆಗೆ ತಮ್ಮ ಆರೋಗ್ಯದ ಬಗ್ಗೆಯೂ ಹೆಚ್ಚಿನ ಕಾಳಜಿ ವಹಿಸಬೇಕು. ಆರೋಗ್ಯವಂತ ಪತ್ರಕರ್ತರಿಂದಲೇ ಸಮಾಜಮುಖಿ ಮತ್ತು ಪರಿಣಾಮಕಾರಿ ಪತ್ರಿಕೋದ್ಯಮ ಸಾಧ್ಯವಾಗುತ್ತದೆಂದು ಹೇಳಿದರು.

ಸುದ್ದಿಗಳನ್ನು ಕೇವಲ ಪ್ರಕಟಿಸುವುದಷ್ಟೇ ಅಲ್ಲ, ಸಮಾಜದಲ್ಲಿನ ಲೋಪದೋಷಗಳನ್ನು ತಿದ್ದುವ, ಜನರಲ್ಲಿ ಜಾಗೃತಿ ಮೂಡಿಸುವ ಹಾಗೂ ಸಾರ್ವಜನಿಕ ಹಿತಾಸಕ್ತಿಯನ್ನು ಕಾಪಾಡುವ ರೀತಿಯಲ್ಲಿ ಜವಾಬ್ದಾರಿಯುತವಾಗಿ ಸುದ್ದಿ ನಿರ್ಮಿಸಬೇಕೆಂದು ಸಲಹೆ ನೀಡಿದರು.

ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸು ತ್ತಿದ್ದು, ಇದೇ ರೀತಿ ಸದಸ್ಯರ ಸಹಕಾರದಿಂದ ಇನ್ನಷ್ಟು ಬಲಿಷ್ಠವಾಗಲಿ. ಪತ್ರಕರ್ತರ ದಿನಾಚರಣೆಯನ್ನು ವಿವಿಧ ಇಲಾಖೆಗಳ ಅಧಿಕಾರಿಗಳು, ಜನಪ್ರತಿ ನಿಧಿಗಳು, ವಿವಿಧ ಸಂಘ-ಸಂಸ್ಥೆಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಮತ್ತು ಪತ್ರಕರ್ತರ ಕುಟುಂಬ ಸದಸ್ಯರ ಸಮ್ಮುಖದಲ್ಲಿ ಅರ್ಥಪೂರ್ಣವಾಗಿ ಆಚರಿಸೋಣವೆಂದರು.

ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಬಿ. ಶಿವರಾಜು, ಪ್ರಧಾನ ಕಾರ್ಯದರ್ಶಿ ಬಿ.ಎಲ್.ಲಕ್ಷ್ಮಣ್, ಖಜಾಂಚಿ ಬಿ. ಆರ್.ಲೋಹಿತ್, ಜಿಲ್ಲಾ ನಿರ್ದೇಶಕ ಮಲ್ಲೇಶ್, ಉಪಾಧ್ಯಕ್ಷ ವೆಂಕಟೇಶ್, ಸಹ ಕಾರ್ಯದರ್ಶಿ ಗಣೇಶ್ ಇತರರು ಉಪಸ್ಥಿತರಿದ್ದರು.

### ಜನಪದ ಸಂಸ್ಕೃತಿ ಉಳಿಸುವಲ್ಲಿ ಕೃಷ್ಣಮೂರ್ತಿಯವರ ಕೊಡುಗೆ ಅಪಾರ

# ಎಸ್.ಜಾನಕಿಯವರ ಗಾಯನ ಸೇವೆ ಸ್ಮರಣೀಯ

• ಪ್ರಜೋದಯ ವರದಿ

**ಬೇಲೂರು:** ಹಳೇಬೀಡು ಹೋಬಳಿ ಮತ್ತಿಘಟ್ಟ ಗ್ರಾಮದ ಕೃಷ್ಣಮೂರ್ತಿಯವರು ಹಳ್ಳಿಹಳ್ಳಿಗಳಿಗೆ ತೆರಳಿ ಜನಪದ ಗೀತೆಗಳನ್ನು ಸಂಗ್ರಹಿಸಿ ಗ್ರಂಥ ರೂಪದಲ್ಲಿ ಪ್ರಕಟಿಸುವ ಮೂಲಕ ಕನ್ನಡ ಜನಪದ ಸಾಹಿತ್ಯ ಸಂರಕ್ಷಣೆಗೆ ಅಪಾರ ಕೊಡುಗೆ ನೀಡಿದ್ದಾರೆಂದು ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಮಂಜೇಗೌಡ ಅವರು ತಿಳಿಸಿದರು.



ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಪಟ್ಟಣದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಜನಪದ ಸಾಹಿತಿ ಮತಿಘಟ್ಟ ಕೃಷ್ಣಮೂರ್ತಿಯವರ ಜನ್ಮದಿನಾಚರಣೆ ಹಾಗೂ ಗಾನ ಕೋಗಿಲೆ ಎಸ್.ಜಾನಕಿ ಅವರ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೃಷ್ಣಮೂರ್ತಿಯವರು ತಮ್ಮ ಬದುಕನ್ನೇ ಜನಪದ ಪರಂಪರೆಯ ಉಳಿವಿಗೆ ಸಮರ್ಪಿಸಿಕೊಂಡ ಸೇವೆ ಸದಾ ಸ್ಮರಣೀಯ. ಎಸ್.ಜಾನಕಿ ಅವರು ಭಾರತೀಯ ಸಂಗೀತ ಲೋಕದ ಅಪರೂಪದ ಗಾಯಕಿಯಾಗಿದ್ದು, ವಿವಿಧ ಭಾಷೆಗಳಲ್ಲಿ 48 ಸಾವಿರಕ್ಕೂ ಅಧಿಕ ಗೀತೆಗಳನ್ನು ಹಾಡಿದ್ದಾರೆ. ಕನ್ನಡದಲ್ಲಿಯೇ 8 ಸಾವಿರಕ್ಕೂ ಹೆಚ್ಚು ಹಾಡುಗಳಿಗೆ ಧ್ವನಿಯಾಗಿರುವ ಅವರು ಸಂಗೀತ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಅನನ್ಯವಾಗಿದೆ ಎಂದು ತಿಳಿಸಿದರು.

ನಿವೃತ್ತ ತಹಶೀಲ್ದಾರ್ ಅಣ್ಣೇಗೌಡ ಅವರು ಮಾತನಾಡಿ, ಮತಿಘಟ್ಟ ಕೃಷ್ಣಮೂರ್ತಿಯವರು ಗ್ರಾಮೀಣ ಬದುಕಿನೊಂದಿಗೆ ಬೆರೆತು ಜನಪದ ಗೀತೆಗಳನ್ನು ಸಂಗ್ರಹಿಸಿ ಪ್ರಕಟಿಸುವ ಮೂಲಕ ಮುಂದಿನ ಪೀಳಿಗೆಗೆ ಅಮೂಲ್ಯವಾದ ಜನಪದ ಪರಂಪರೆಯನ್ನು ಉಳಿಸಿ ಕೊಟ್ಟಿದ್ದಾರೆಂದರು.

ಸಂಘಟನಾ ಕಾರ್ಯದರ್ಶಿ ಬಮ್ಮಡಿಹಳ್ಳಿ ಕುಮಾರಸ್ವಾಮಿ ಅವರು ಮಾತನಾಡಿ, ಎಸ್. ಜಾನಕಿ ಅವರು 17 ಭಾಷೆಗಳಲ್ಲಿ ಗಾಯನ ಸೇವೆ ಸಲ್ಲಿಸಿದ್ದು, ತಮ್ಮ ವಿಶಿಷ್ಟ ಧ್ವನಿಯಿಂದ ಮಕ್ಕಳಿಂದ ಹಿರಿಯರವರೆಗೆ ಎಲ್ಲರ ಮನಸ್ಸು ಗೆದ್ದಿದ್ದಾರೆ. 30ಕ್ಕೂ ಹೆಚ್ಚು ಪ್ರಶಸ್ತಿಗಳಿಗೆ ಭಾಜನರಾಗಿರುವ ಅವರು ಕನ್ನಡದಲ್ಲಿ ಡಾ.ರಾಜ್ ಕುಮಾರ್ ಅವರೊಂದಿಗೆ ಹಾಡಿರುವ ಗೀತೆಗಳು ಇಂದಿಗೂ ಜನಪ್ರಿಯವಾಗಿವೆ ಎಂದರು.

ಪುರಸಭೆ ಅಧ್ಯಕ್ಷ ಅಕ್ರಮ್ ಶರೀಫ್ ಅವರು ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ ಪ್ರತಿ ತಿಂಗಳು ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿರುವುದು ಶ್ಲಾಘನೀಯ. ಸಮಾಜಕ್ಕೆ ದಾರಿ ತೋರಿದ ಮಹನೀಯರನ್ನು ಸ್ಮರಿಸುವುದು ಯುವಪೀಳಿಗೆಗೆ ಪ್ರೇರಣೆಯಾಗಲಿದೆ ಎಂದರು.

ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಜಿ.ಕೆ.ವೀಣಾ ಮಾತನಾಡಿ, ಜನಪದ ಗೀತೆಗಳು ನಮ್ಮ ಸಂಸ್ಕೃತಿ, ಸಂಪ್ರದಾಯ ಹಾಗೂ ಗ್ರಾಮೀಣ ಬದುಕಿನ ಪ್ರತಿ ಬಿಂಬವಾಗಿದ್ದು, ಅವುಗಳನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆಂದು ಹೇಳಿದರು.

81 ವರ್ಷದ ನಿವೃತ್ತ ಅಂಗನವಾಡಿ ಕಾರ್ಯಕರ್ತೆ ರತ್ನಮ್ಮ ಹಾಗೂ ಜನಪದ ಕಲಾವಿದೆ ಶೋಭಾ ಹರೀಶ್ ಅವರನ್ನು ಸನ್ಮಾನಿಸಲಾಯಿತು.

ಸಂಶೋಧಕ ಸಾಹಿತಿ ಡಾ.ಶ್ರೀವತ್ಸ ವಟಿ, ಕನ್ನಡ ಸಾಹಿತ್ಯ ಪರಿಷತ್ ಗೌರವ ಸಲಹೆಗಾರ ಮಾ. ಶಿವಮೂರ್ತಿ, ಗೌರವ ಕಾರ್ಯದರ್ಶಿ ಎಸ್.ಮಹೇಶ್, ಕೋಶಾಧ್ಯಕ್ಷ ಗುರುರಾಜ್, ನಿರ್ದೇಶಕ ಸುಲೇಮಾನ್, ರಂಗಕಲಾವಿದ ಆಡಿಟರ್ ಕೃಷ್ಣಮೂರ್ತಿ, ಸರಸ್ವತಿ, ಧರ್ಮ, ಪ್ರಕೃತಿ, ನಾಗರಾಜ್, ಹರೀಶ್, ಧನಂಜಯ ಇತರರು ಉಪಸ್ಥಿತರಿದ್ದರು.

## ಇ-20 ಪೆಟ್ರೋಲ್ ನಿಂದಾಗಿ ವಾಹನಗಳ ಮೈಲೇಜ್ ಇಳಿಕೆ

• ಪ್ರಜೋದಯ ವರದಿ

**ನವದೆಹಲಿ:** ಇ-20 ಪೆಟ್ರೋಲ್‌ನ ಬಳಕೆಯಿಂದಾಗಿ ವಾಹನಗಳ ಇಂಧನ ದಕ್ಷತೆಯು (ಮೈಲೇಜ್) ಶೇ.2ರಿಂದ ಶೇ.6ರವರೆಗೆ ಕಡಿಮೆ ಆಗಬಹುದೆಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಅವರು ಲೋಕಸಭೆಗೆ ಗುರುವಾರ ತಿಳಿಸಿದ್ದಾರೆ.

ಇಂಧನ ದಕ್ಷತೆ ತಗ್ಗುವ ಪ್ರಮಾಣವು ವಾಹನವು ಯಾವ ಮಾದರಿಗೆ ಸೇರಿದೆ, ಅದು ಎಷ್ಟು ಹಳೆಯದಾಗಿದೆ ಎಂಬುದನ್ನು ಆಧರಿಸಿದೆ ಎಂದು ಅವರು ಲಿಖಿತ ಉತ್ತರದಲ್ಲಿ ಹೇಳಿ ದ್ದಾರೆ. ಎಂಜಿನ್‌ನ ಬಾಳಿಕೆಯ ಕುರಿತಾ ಗಿಯೂ ಪರೀಕ್ಷೆಗಳನ್ನು ನಡೆಸಲಾಗಿದೆ, ಇ-20 ಪೆಟ್ರೋಲ್‌ನಿಂದಾಗಿ ವೈಫಲ್ಯ ಆಗಿರುವುದು ಕಂಡುಬಂದಿಲ್ಲ ಎಂದು ಹೇಳಿದ್ದಾರೆ.

ಇ-20 ಇಂಧನದಿಂದಾಗಿ ವಾಹನದ ವೇಗೋತ್ಕರ್ಷ ಉತ್ತಮ ಆಗುತ್ತದೆ, ಚಾಲನಾ ಅನುಭವ ಉತ್ತಮವಾಗಿರುತ್ತದೆ, ಇ-10 ಪೆಟ್ರೋಲ್‌ಗೆ ಹೋಲಿಸಿದರೆ ಇದರಲ್ಲಿ ಇಂಗಾಲದ ಡೈಆಕ್ಸೈಡ್ ಉಗುಳುವಿಕೆಯು ಅಂದಾಜು ಶೇ.30 ರಷ್ಟು ಕಡಿಮೆ ಎಂದು ಗಡ್ಕರಿ ಮಾಹಿತಿ ನೀಡಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK